


ನಾಡಿನ ಪ್ರಮುಖ ಇತಿಹಾಸ ಮತ್ತು ಪುರಾತತ್ವ ಶಾಸ್ತ್ರಜ್ಞರಾಗಿ ಗುರುತಿಸಿಕೊಂಡಿರುವ ಡಾ. ಶರಣಬಸಪ್ಪ ಕೋಲ್ಕಾರ ಅವರು ಕಾರಟಗಿ ತಾಲೂಕಿನ ಬೂದಗುಂಪಾ ಗ್ರಾಮದವರಾಗಿದ್ದು ಗಂಗಾವತಿಯ ಕಲ್ಮಠ ಶ್ರೀ ಚನ್ನಬಸವಸ್ವಾಮಿ ಮಹಿಳಾ ಕಾಲೇಜಿನಲ್ಲಿ ಪ್ರಾಚಾರ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಶ್ರೀಯುತರು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ, ಎಂ.ಫಿಲ್, ಶಾಸನಶಾಸ್ತ್ರ ಡಿಪ್ಲೊಮಾ ಪದವಿಗಳನ್ನು ಹಾಗೂ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಕನಕಗಿರಿಯ ಇತಿಹಾಸ ಮತ್ತು ಪರಂಪರೆ, ಶಿಲಾಯುಗದ ಗವಿಚಿತ್ರಗಳು, ವಿಜಯನಗರ ಪರಿಸರ, ಕೊಪ್ಪಳ ಹಂಪಿ ಪ್ರದೇಶದ ಪ್ರಾಗಿತಿಹಾಸ, ಕಲ್ಯಾಣ ಕರ್ನಾಟಕದ ಪ್ರಾಗಿತಿಹಾಸ ಮತ್ತು ಆದಿಮ ಸಂಸ್ಕೃತಿ, ಗಂಗಾವತಿ ತಾಲೂಕು ದರ್ಶನ, ಗಂಗಾವತಿ ತಾಲೂಕು ಗ್ಯಾಸೆಟಿಯರ್, ವಿಜಯನಗರದ ಮಾತೃಸ್ಥಾನ ಆನೆಗೊಂದಿ, ಭವ್ಯ ಪರಂಪರೆಯ ತಾಣ ಆನೆಗೊಂದಿ ಮುಂತಾದ 13 ಸಂಶೋಧನಾ ಪುಸ್ತಕಗಳನ್ನು ರಚಿಸಿದ್ದಾರೆ. 15 ಸ್ಮರಣ ಸಂಚಿಕೆಗಳನ್ನು, 4 ಅಭಿನಂದನಾ ಗ್ರಂಥಗಳನ್ನು ಸಂಪಾದಿಸಿ, ನೂರಾರು ಸಂಶೋಧನಾ ಮತ್ತು ಸಾಂಸ್ಕೃತಿಕ ಲೇಖನಗಳನ್ನು ಬರೆದು ಪ್ರಕಟಿಸಿದ್ದಾರೆ. ಹಲವು ರಾಷ್ಟ್ರೀಯ, ರಾಜ್ಯಮಟ್ಟದ ವಿಚಾರಸಂಕಿರಣ, ಸಭೆ, ಸಮ್ಮೇಳನಗಳಲ್ಲಿ ಸಂಶೋಧನಾ ಪ್ರಬಂಧ ಮಂಡಿಸಿದ್ದಾರೆ. ಬಿಜಾಪುರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ, ಅಕಾಡೆಮಿಕ್ ಕೌನ್ಸಿಲ್ ಸದಸ್ಯರಾಗಿ, ಬೆಂಗಳೂರಿನ ಕರ್ನಾಟಕ ಇತಿಹಾಸ ಅಕಾಡೆಮಿಯ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಹಾಗೂ ಪ್ರಸ್ತುತ ಕರ್ನಾಟಕ ಸರಕಾರದ ಕನ್ನಡ ಪುಸ್ತಕ ಪ್ರಾಧಿಕಾರದ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅಲ್ಲದೇ ಇವರ ಮಾರ್ಗದರ್ಶನದಲ್ಲಿ ಮೂವರು ಪಿಎಚ್.ಡಿ ಮಾಡಿ ಡಾಕ್ಟರೇಟ್ ಪಡೆದಿದ್ದಾರೆ. ಇವರ ಸಾಧನೆಗಾಗಿ ಗಂಗಾವತಿ ತಾಲೂಕು ನಾಲ್ಕನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆಯ ಗೌರವ, ಕೊಪ್ಪಳ ಜಿಲ್ಲಾ ಶರಣಸಾಹಿತ್ಯ ಪರಿಷತ್ತಿನ ಪ್ರಥಮ ಯುವಜನ ಸಮಾವೇಶದ ಸರ್ವಾಧ್ಯಕ್ಷತೆಯ ಗೌರವ ದೊರಕಿದೆ. ಕೊಪ್ಪಳ ಜಿಲ್ಲಾ ಆಡಳಿತದಿಂದ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ರತ್ನ ಪ್ರಶಸ್ತಿ, ಕನಕಾಚಲ ಪ್ರಶಸ್ತಿ, ಕರಿಸಿದ್ಧ ಪ್ರಶಸ್ತಿ, ಬಸವಾನುಗ್ರಹ ಪ್ರಶಸ್ತಿ, ಸದ್ಧರ್ಮ ಪ್ರಶಸ್ತಿ, ಶರಣಶ್ರೀ ಪ್ರಶಸ್ತಿ, ಕಲ್ಯಾಣ ಕರ್ನಾಟಕ ಕಣ್ಮಣಿ ಪ್ರಶಸ್ತಿ, ಕದಂಬ ಪ್ರಶಸ್ತಿ, ಶಂಕರಭಾಸ್ಕರ ಪ್ರಶಸ್ತಿ ಮುಂತಾದವು ಇವರ ಮುಡಿಗೇರಿವೆ. ಪ್ರಸ್ತುತ ಪುಸ್ತಿಕೆಯಲ್ಲಿ ವಿಜಯನಗರದ ಚರಿತ್ರೆಯ ಎರಡು ಬಹುಮುಖ್ಯ ಸಂಗತಿಗಳ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ನಿರ್ಧರಿಸಿದ್ದಾರೆ. ಮೌಖಿಕ ಪರಂಪರೆಗೆ ಚಾರಿತ್ರಿಕತೆಯನ್ನು ತಂದುಕೊಟ್ಟ ಹಿರಿಮೆ ಇಲ್ಲಿಯ ಸಂಶೋಧನಾ ಲೇಖನಗಳಿಗಿದೆ.

ಡಾ. ಸಿದ್ದಲಿಂಗಪ್ಪ ಕೊಟ್ನೆಕಲ್
ಕನ್ನಡ ಉಪನ್ಯಾಸಕರು, ಕೊಪ್ಪಳ

[illegible] ಪ್ರಿಂಟಿಂಗ್ ಪ್ರೆಸ್, ಕೊಪ್ಪಳ. # 8147348440

ಕೃಷ್ಣದೇವರಾಯನ ಸಮಾಧಿ
ಹಾಗೂ
ಕೆಂಪೇಗೌಡ
ಬಂಧನದಲ್ಲಿದ್ದ ಸೆರೆಮನೆ

-ಡಾ. ಶರಣಬಸಪ್ಪ ಕೋಲ್ಕಾರ



ಪ್ರಕಾಶಕರು :
ಕೊಪಣನಾಡು ಸಂಶೋಧನಾ ಸಂಸ್ಥೆ
ಗಂಗಾವತಿ - 583 227, ಜಿ॥ ಕೊಪ್ಪಳ

ಆನೆಗೊಂದಿ
ಕೃಷ್ಣದೇವರಾಯನ ಸಮಾಧಿ
ಹಾಗೂ
ಕೆಂಪೇಗೌಡ ಬಂಧನದಲ್ಲಿದ್ದ ಸೆರೆಮನೆ

◆

ಡಾ. ಶರಣಬಸಪ್ಪ ಕೋಲ್ಕಾರ ಎಂ.ಎ.,ಎಂ.ಫಿಲ್.,ಪಿಜಿಡಿ(ಎಪಿ), ಪಿಎಚ್.ಡಿ
ಪ್ರಾಚಾರ್ಯರು, ಕಲ್ಮಠ ಶ್ರೀ ಚನ್ನಬಸವಸ್ವಾಮಿ ಮಹಿಳಾ ಮಹಾವಿದ್ಯಾಲಯ,
ಗಂಗಾವತಿ–583227. ಮೊ: 9845267155

◆

ಪ್ರಕಾಶಕರು :
ಕೊಪಣನಾಡು ಸಂಶೋಧನಾ ಸಂಸ್ಥೆ
ಹೊಸಳ್ಳಿ ರೋಡ್ ಏರಿಯಾ, ಹಿರೇಜಂತಕಲ್ ಬೈಪಾಸ್ ರಸ್ತೆ,
ಎಡ ಎರಡನೇ ಅಡ್ಡರಸ್ತೆ, ಗಂಗಾವತಿ – 583227.
ಜಿಲ್ಲಾ : ಕೊಪ್ಪಳ. ಮೊಬೈಲ್ ನಂ. 9845267155

ANEGONDI : SRI KRISHNADEVARAYA'S TOMB AND PRISON WHERE KEMPEGOUDA WAS IMPRISONED

Author	:	**Dr. SHARANABASAPPA KOLKAR** M.A.,M.Phil., PGD (AP)Ph.D
Publisher	:	Kopana Nadu Research Institute Gangavati - 583227 Dist : Koppal Cell : 9845267155
First Edition	:	2025
©	:	Author
Copies	:	1000
Pages	:	32
Price	:	50/-
Size	:	Demmy 1/8
Paper Used	:	70 GSM NS Maplitho Paper

ಆನೆಗೊಂದಿ : ಶ್ರೀ ಕೃಷ್ಣದೇವರಾಯನ ಸಮಾಧಿ ಹಾಗೂ ಕೆಂಪೇಗೌಡ ಬಂಧನದಲ್ಲಿದ್ದ ಸೆರೆಮನೆ

ಲೇಖಕರು	:	**ಡಾ. ಶರಣಬಸಪ್ಪ ಕೋಲ್ಕಾರ**
ಪ್ರಕಾಶಕರು	:	**ಕೊಪಣನಾಡು ಸಂಶೋಧನಾ ಸಂಸ್ಥೆ, ಗಂಗಾವತಿ** ಜಿ॥ ಕೊಪ್ಪಳ
ಮುದ್ರಣ	:	ಪ್ರಥಮ 2025
ಹಕ್ಕುಗಳು	:	ಲೇಖಕರದು
ಪ್ರತಿಗಳು	:	1000
ಪುಟಗಳು	:	32
ಬೆಲೆ	:	50/–
ಪುಸ್ತಕದ ಆಕಾರ	:	ಡೆಮ್ಮಿ 1/8
ಬಳಸಿದ ಕಾಗದ	:	ಎನ್. ಎಸ್. ಮ್ಯಾಪಲೀಥೋ 70 ಜಿ.ಎಸ್.ಎಮ್.
ಮುದ್ರಣ	:	**ಐಶ್ವರ್ಯ ಪ್ರಿಂಟಿಂಗ್ ಪ್ರೆಸ್** ಡಾ. ಅಂಬೇಡ್ಕರ್ ಸರ್ಕಲ್, ಕೊಪ್ಪಳ ಮೊ. 8147348440, 9448300070

ತಂದೆ ದಿ॥ ಶ್ರೀ ಮರಿಗೌಡ ತಾಯಿ ದಿ॥ ಶ್ರೀಮತಿ ಅಂದಮ್ಮ
ಮಾವ ದಿ॥ ಶ್ರೀ ಚನ್ನಪ್ಪ ಬಿಳಿಎಲೆ, ಜಾಲಿಹಾಳ
ಮಾವ ದಿ॥ ಶ್ರೀ ಎಸ್. ಬಿ. ಬಂಗಾರಿ ಮುದ್ದೇಬಿಹಾಳ
ಅಕ್ಕ ದಿ॥ ಶ್ರೀಮತಿ ಈರಮ್ಮ ಬಿಳಿಎಲೆ ಜಾಲಿಹಾಳ
ಸಹೋದರ ದಿ॥ ಶ್ರೀ ಡಿ. ಎಂ. ಪಾಟೀಲ್ ಗದಗ

ಇವರ ಸ್ಮರಣಾರ್ಥ ಕೊಡುಗೆ



ಗ್ರಂಥ ದಾನಿಗಳು :

ಡಾ. ಮಹಾಂತೇಶ ಮಲ್ಲನಗೌಡರ

ನಿವೃತ್ತ ಪ್ರಾಚಾರ್ಯರು ಹಾಗೂ ಸಾಹಿತಿಗಳು,
ಗವಿಶ್ರೀ ನಗರ, 1ನೇ ಕ್ರಾಸ್, ಕೊಪ್ಪಳ

ಮುನ್ನುಡಿ...

'ಇತಿಹಾಸ' ಬಗೆದಷ್ಟು ರೋಚಕ, ಅಗೆದಷ್ಟು ಆಗರ, ಸವಿದಷ್ಟು ಸಾಗರ, ಅರಿದಷ್ಟು ಆಳವಾದ ಕ್ಷೇತ್ರವಾಗಿದೆ. ಈ ಕಾರಣಗಳಿಂದಲೇ ಈಗಲೂ ಕೂಡ ಇತಿಹಾಸ ಕೌತುಕದ ಸಂಗತಿಯಾಗಿದೆ, ಮಾನವನ ವಿಕಾಸ, ವಿಸ್ಮಯದ ನಡೆಯ ಭಂಡಾರವಾಗಿದೆ.

ಇತಿಹಾಸದಲ್ಲಿ ಗತಿಸಿದ ಘಟನೆಗಳ ಗತಿ, ರೀತಿ, ನೀತಿ, ಮಿತಿಗಳನ್ನು ಸಂಶೋಧಿಸುವುದು ಅಷ್ಟು ಸುಲಭದ ಕೆಲಸವಲ್ಲ. ಅದೊಂದು ಸುಧೀರ್ಘವಾದ ತಪಸ್ಸು. ಇತಿಹಾಸದಲ್ಲಿ ದೊರೆಯುವ ಸಣ್ಣ ಸಣ್ಣ ಲಿಖಿತ-ಅಲಿಖಿತ ಮಾಹಿತಿಯನ್ನು ಅಲಕ್ಷಿಸದೆ ನಿರಂತರವಾಗಿ ಸಂಶೋಧಿಸಿ ಹೊಸ ಸಂಗತಿಯನ್ನು ಹೊರ ತಂದರೆ ಮಾತ್ರ ಇತಿಹಾಸ ಇನ್ನಷ್ಟು ಅರ್ಥವಾಗುತ್ತದೆ. ಅಂತಹ ಒಂದು ಕಿರು ಸಂಶೋಧನೆ ನಾಡಿನ ಕೆಲ ರೋಚಕ ಇತಿಹಾಸದ ಮೇಲೆ ಹೊಸ ಬೆಳಕನ್ನು ಚೆಲ್ಲಬಹುದೆನ್ನುವುದಕ್ಕೆ ಇದೀಗ ಪ್ರಕಟಗೊಂಡಿರುವ ಈ "ಕೃಷ್ಣದೇವರಾಯನ ಸಮಾಧಿ ಮತ್ತು ಕೆಂಪೇಗೌಡ ಬಂಧನದಲ್ಲಿದ್ದ ಸೆರೆಮನೆ" ಎಂಬ ಪುಸ್ತಕವೇ ಸಾಕ್ಷಿಯಾಗಿದೆ".

ಈ ಪುಸ್ತಕದಲ್ಲಿನ ಎರಡು ಲೇಖನಗಳು ನಮ್ಮ ನಾಡಿನ ಎರಡು ಮೇರು ವ್ಯಕ್ತಿತ್ವಗಳ ಬದುಕಿನ ಘಟನೆಗಳಿಗೆ ಸಂಬಂಧಿಸಿವೆ. ಒಂದು ವಿಜಯನಗರದ ಶ್ರೀಕೃಷ್ಣದೇವರಾಯನ ಸಮಾಧಿಯ ಸ್ಥಳದ ಗುರುತಿಸುವಿಕೆ ಇನ್ನೊಂದು ಬೆಂಗಳೂರಿನ ನಿರ್ಮಾತೃ, ನಾಡಪ್ರಭು ಕೆಂಪೇಗೌಡರು ಜೈಲುವಾಸದಲ್ಲಿದ್ದ ಸೆರೆಮನೆಯ ಗುರುತಿಸುವಿಕೆ. ಈ ಎರಡೂ ವಿಷಯಗಳ ಕುರಿತಾಗಿ ಇತಿಹಾಸಕಾರರಾದ ಡಾ. ಶರಣಬಸಪ್ಪ ಕೋಲ್ಕಾರ ಅವರು ಪೂರಕ ಸಮರ್ಥನೀಯ ಸಾಕ್ಷ್ಯಗಳೊಂದಿಗೆ ಸಂಶೋಧನಾ ಲೇಖನಗಳನ್ನು ಪ್ರಸ್ತುತಪಡಿಸಿದ್ದಾರೆ.

ವಿಜಯನಗರ ಸಾಮ್ರಾಜ್ಯದ ಆಳ್ವಿಕೆ ಜಾಗತಿಕ ಇತಿಹಾಸದಲ್ಲಿಯೇ ವಿಶೇಷವಾದಂತಹ ಘಟನೆಯಾಗಿದೆ. ಜಗತ್ತಿನ ಯಾವುದೇ ಮಹಾನ್ ಸಾಮ್ರಾಜ್ಯಕ್ಕೂ ಕಡಿಮೆಯಿಲ್ಲದಂತೆ ಎಲ್ಲಾ ಕ್ಷೇತ್ರಗಳ ವೈಭವಗಳನ್ನು ಪ್ರದರ್ಶಿಸಿದ ಹಿರಿಮೆ ವಿಜಯನಗರ ಸಾಮ್ರಾಜ್ಯದ್ದಾಗಿದೆ. ಸೈನಿಕ ಸಾಹಸ, ಆಡಳಿತ, ಧರ್ಮ, ಸಾಹಿತ್ಯ, ಕಲೆ ವಾಸ್ತುಶಿಲ್ಪ ಸಮಾಜ ಮುಂತಾದ ಕ್ಷೇತ್ರಗಳಲ್ಲಿ ಅಪಾರ ಸಾಧನೆಯನ್ನು ಮಾಡಿದ ಶ್ರೇಯಸ್ಸು, ಕೀರ್ತಿ ವಿಜಯನಗರ ಸಾಮ್ರಾಜ್ಯಕ್ಕೆ ಸಲ್ಲುತ್ತದೆ.

ಶ್ರೀಕೃಷ್ಣದೇವರಾಯ ಸುವರ್ಣ ಸಾಮ್ರಾಜ್ಯ ಕಟ್ಟಿದ ಸುವರ್ಣ ಪುರುಷ. ಶ್ರೀ ಕೃಷ್ಣದೇವರಾಯನು ಆಡಳಿತ, ಶೌರ್ಯ, ಯುದ್ಧ ಕೌಶಲ್ಯತೆ, ಕಲೆ, ಸಂಸ್ಕೃತಿಗಳಿಗೆ ನೀಡಿದ ಕೊಡುಗೆ ಅನನ್ಯವಾಗಿದೆ. ಶ್ರೀ ಕೃಷ್ಣದೇವರಾಯನ ದಿವ್ಯ ವೀರಪ್ರಭೆಯು ಶತಶತಮಾನಗಳು ಕಳೆದರೂ ಇನ್ನಷ್ಟು ಪ್ರಜ್ವಲವಾಗುತ್ತಾ ಸಾಗುತ್ತಿದೆ.

ಇಂಥಹ ಸಾಮ್ರಾಜ್ಯ ಚರಿತ್ರೆಯ ಬಗ್ಗೆ ಪೌರಾಣಿಕ, ಚಾರಿತ್ರಿಕ, ಐತಿಹಾಸಿಕ, ಹತ್ತು ಹಲವಾರು ಕಥೆಗಳು ಪ್ರಚಲಿತದಲ್ಲಿವೆ. ಇವುಗಳ ಪ್ರಭಾವದಿಂದಾಗಿ ಕೆಲವೊಮ್ಮೆ ಇತಿಹಾಸದ ನಿಜ ಸಂಗತಿಗಳು ಮರೆಮಾಚಿರುತ್ತವೆ. ಅವುಗಳನ್ನು ಸಂಶೋಧಿಸುವುದೇ ಸಂಶೋಧಕನ ನಿಜವಾದ ಜವಾಬ್ದಾರಿಯಾಗಿರುತ್ತದೆ. ಶ್ರೀ ಕೃಷ್ಣದೇವರಾಯನ ಆಡಳಿತ ಹಾಗೂ ಸಾಂಸ್ಕೃತಿಕ ಪರಂಪರೆಯ ಗ್ರಂಥಗಳು ಲೇಖನಗಳು ಸಾಕಷ್ಟು ಲಭ್ಯವಿದ್ದರೂ ಕೂಡ ಶ್ರೀ ಕೃಷ್ಣದೇವರಾಯನ ಸಮಾಧಿಯ ಕುರಿತಾಗಿ ಯಾವುದೇ ಸ್ಪಷ್ಟ ಮಾಹಿತಿ ಇಲ್ಲ, ಆದರೆ ಮೌಖಿಕ ಹೇಳಿಕೆಗಳು ಪ್ರಚಲಿತದಲ್ಲಿವೆ. ಅವು ಆನೆಗೊಂದಿಯ 64 ಕಂಭಗಳ ಮಂಟಪವನ್ನು ಕೃಷ್ಣದೇವರಾಯನ ಸಮಾಧಿ ಎಂದು ನಂಬಿವೆ. ಇಂಥಹ ಸಂದೇಹವನ್ನು ನಿವಾರಿಸಲಿಕ್ಕೆ ಸತತ ಸಂಶೋಧನೆಯಿಂದ ಹಿರಿಯ ಸಂಶೋಧಕರಾದ

ಡಾ. ಶರಣಬಸಪ್ಪ ಕೋಲ್ಕಾರ್ ಶ್ರೀ ಕೃಷ್ಣದೇವರಾಯನ ಸಮಾಧಿಯ ಸ್ಥಳದ ಖಚಿತತೆಯನ್ನು ಮೊದಲನೇ ಲೇಖನದಲ್ಲಿ ಗುರುತಿಸಿದ್ದಾರೆ. ಡಾ. ಶರಣಬಸಪ್ಪ ಕೋಲ್ಕಾರ್ ನಮ್ಮ ನಾಡಿನ ಹಿರಿಯ ಸಂಶೋಧಕರು, ಪ್ರಾಚಾರ್ಯರು, ತಮ್ಮ ಮೂರು ದಶಕಕ್ಕೂ ಮಿಗಿಲಾದ ನಿರಂತರ ಸಂಶೋಧನೆಯಿಂದಾಗಿ ಕಲ್ಯಾಣ ಕರ್ನಾಟಕದ ಇತಿಹಾಸದಲ್ಲಿಯೇ ಮಹತ್ವದ ಸ್ಥಳವಾಗಿರುವ ಕೊಪ್ಪಳದ ಸುತ್ತಮುತ್ತಲಿನ ಹಲವಾರು ಇತಿಹಾಸದ ಕುರುಹುಗಳನ್ನು ಸಂಶೋಧಿಸಿ ನಾಡಿಗೆ ಪ್ರಚುರಪಡಿಸಿದ್ದಾರೆ. ಪ್ರಾಗೈತಿಹಾಸಿಕ ಕಾಲದ ಆದಿಮಾನವರ ಮೊರೆರ ಸಮಾಧಿಗಳು, ಗವಿ ಕಲ್ಲಾಸರೆಯಲ್ಲಿರುವ ಶಿಲಾಯುಗದ ಚಿತ್ರಗಳು, ಕನಕಗಿರಿಯ ಇತಿಹಾಸದ ಕುರುಹುಗಳು, ಹಾಗೂ ಇತರ ಅಪರೂಪದ ಇತಿಹಾಸದ ಸಂಗತಿಗಳ ಮೇಲೆ ತಮ್ಮ ಸಂಶೋಧನೆಯ ಬೆಳಕನ್ನು ಚೆಲ್ಲುವ ಮೂಲಕ ಕರ್ನಾಟಕದ ಇತಿಹಾಸಕ್ಕೆ ವಿಶೇಷ ಕೊಡುಗೆಯನ್ನು ಕೊಟ್ಟಿದ್ದಾರೆ .

ಡಾ. ಶರಣಬಸಪ್ಪ ಕೊಲ್ಕಾರ್‌ರವರ ಅನುಭವದಿಂದ ಹೊರಬಂದ ಕೃತಿಯ ಪ್ರಥಮ ಲೇಖನದಲ್ಲಿ 64 ಕಂಬಗಳ ಶ್ರೀ ಕೃಷ್ಣದೇವರಾಯನ ಸಮಾಧಿಯನ್ನೇ ಆಧಾರವಾಗಿಟ್ಟುಕೊಂಡು ಸುತ್ತಮುತ್ತಲಿನ ಸಾಧ್ಯತೆಗಳನ್ನು ವಿವರಿಸುತ್ತ ಶ್ರೀ ಕೃಷ್ಣದೇವರಾಯನ ವ್ಯಕ್ತಿತ್ವವನ್ನು ಸಂಕೇತಿಸುವ ಶಿಲಾಮಂಟಪ, ರಾಮಾಯಣದಲ್ಲಿನ ವಾಲಿಯ ಸಂಹಾರ ಹಾಗೂ ಸಂಸ್ಕಾರದ ಸ್ಥಳ, ಸಲ್ಲೇಖನ ವ್ರತಾಚರಣೆಯ ಸ್ಥಳಗಳು, ಮುಕ್ತಿನರಸಿಂಹ ದೇವಾಲಯ ಪಿಂಡಮಂಟಪ, ಚಿಂತಾಮಣಿಯ ಮಂಟಪ, ನವ ವೃಂದಾವನ, ಆಯುಧ ಪುರುಷ ಸುದರ್ಶನ ಚಕ್ರ ಮಂಟಪ, ನರಪತಿ ಸಂಸ್ಥಾನದ ರಾಜರ ಸಮಾಧಿಗಳು, ಹೀಗೆಯೇ ಹಲವಾರು ಸುತ್ತಮುತ್ತಲಿನ ಪರಿಸರದ ಸ್ಥಳ ಹಾಗೂ ಧಾಮಗಳ ಬಗ್ಗೆ ಸವಿವರವಾಗಿ ವಿವರಿಸುತ್ತ ಶ್ರೀ ಕೃಷ್ಣದೇವರಾಯನ ಸಮಾಧಿ 64 ಕಂಬಗಳಿರುವ ಮಂಟಪವೆಂದು ಸಮರ್ಥನೀಯ ಸಾಕ್ಷಗಳೊಂದಿಗೆ ಸಂಶೋಧಿಸಿರುವುದು ಸಂಶೋಧಕರ ಆಳವಾದ ಅಧ್ಯಯನ ದ್ಯೋತಕವಾಗಿದೆ. ಇವರ ಎರಡನೇ ಸಂಶೋಧನಾ ಲೇಖನ ನಾಡಪ್ರಭು ಕೆಂಪೇಗೌಡರನ್ನು ಬಂಧಿಸಿಟ್ಟ ಬಂದಿಖಾನೆಯ ಕುರಿತಾಗಿದೆ. ನಾಡಪ್ರಭು ಕೆಂಪೇಗೌಡ ಕನ್ನಡಿಗರೆಲ್ಲರಿಗೂ ಚಿರಪರಿಚಿತ ಹೆಸರು. ನಾಡಿನ ಇತಿಹಾಸದ ಪುಟಗಳಲ್ಲಿ ಆಡಳಿತದ ಕ್ಷೇತ್ರದಲ್ಲಿ ದಟ್ಟವಾದ ಹೆಜ್ಜೆ ಮೂಡಿಸಿದ ಆಡಳಿತಗಾರ. ಇಂತಹ ಕೆಂಪೇಗೌಡರು ವಿಜಯನಗರ ಸಾಮ್ರಾಜ್ಯದಲ್ಲಿ ಸಾಮಂತ ಅರಸರಾಗಿದ್ದನು. ಸಾಮಂತ ಅರಸನಾಗಿದ್ದ ಕೆಂಪೇಗೌಡರಿಂದಾದ ಪ್ರಮಾದದಿಂದಾಗಿ ವಿಜಯನಗರದ ಅರಸರು ಕೆಂಪೇಗೌಡರನ್ನು ಬಂಧಿಸಿ ಆನೆಗೊಂದಿಯ ಸೆರೆಮನೆಗೆ ತಳ್ಳುತ್ತಾರೆ. ಆದರೆ ಇಲ್ಲಿಯವರೆಗೆ ಆನೆಗೊಂದಿಯಲ್ಲಿ ಕೆಂಪೇಗೌಡರನ್ನು ಎಲ್ಲಿ ಬಂಧಿಸಿಟ್ಟಿದ್ದರೆನ್ನುವುದು ಸಂಶೋಧಕರಿಗೆ ಕುತೂಹಲದ ಪ್ರಶ್ನೆಯಾಗಿ ಉಳಿದಿತ್ತು. ಇಂತಹ ಕುತೂಹಲವನ್ನು ತಮ್ಮ ಸುದೀರ್ಘ ಸಂಶೋಧನೆಯ ಅನುಭವದಿಂದ ಆನೆಗೊಂದಿಯ ಸಮೀಪದಲ್ಲಿರುವ ಜಿಂಜರ ಬೆಟ್ಟದ ಮೇಲಿನ ಕಟ್ಟಡಗಳೇ ಕೆಂಪೇಗೌಡರನ್ನು ಬಂಧಿಸಿಟ್ಟ ಬಂದಿಖಾನೆಯಾಗಿತ್ತು ಎಂದು ಡಾ. ಶರಣಬಸಪ್ಪ ಕೋಲ್ಕಾರ್ ಸಾಂದರ್ಭಿಕ ಸಾಕ್ಷಗಳೊಂದಿಗೆ ಸಮರ್ಥಿಸಿ ಗುರುತಿಸಿದ್ದಾರೆ.

ಕೆಂಪೇಗೌಡರನ್ನು ಆನೆಗೊಂದಿಯ ಬಂಧಿಖಾನೆಯಲ್ಲಿಟ್ಟ ಸಂಗತಿ ಬಹಳಷ್ಟು ಜನರಿಗೆ ತಿಳಿದೇ ಇಲ್ಲ. ಕೆಲವೊಂದು ಕಾಲ್ಪನಿಕ ಕಥೆಗಳಿವೆ. ಇದೇ ಸಂಶೋಧಕರು ಮೊದಲು ಆನೆಸಾಲು, ಒಂಟಿಸಾಲು ಎಂಬ ಕಟ್ಟಡವೇ ಈ ಸೆರೆಮನೆ ಎಂದು ಡಾ. ಕೋಲ್ಕಾರ ಅವರು ಪ್ರತಿಪಾದಿಸಿದ್ದರು. ಆದರೆ ಈಗ ಮೊದಲು ಪ್ರತಿಪಾದಿಸಿದ್ದ ಸ್ಥಳವನ್ನು ಬದಿಗಿರಿಸಿ ಈಗ ಲಭ್ಯವಾಗಿರುವ ಜಿಂಜಿರ

ಬೆಟ್ಟದಲ್ಲಿನ ಅವಶೇಷಗಳು ಕೆಂಪೇಗೌಡರನ್ನು ಬಂಧಿಸಿಟ್ಟ ಜೈಲಾಗಿತ್ತು ಎಂದು ವಿವರಿಸುತ್ತಾರೆ. ಸ್ಥಳಿಕರ ಒಂದು ಸಣ್ಣ ಮೌಖಿಕ ಎಳೆಯನ್ನಿಟ್ಟುಕೊಂಡು ಕೆಂಪೇಗೌಡರನ್ನು ಬಂಧಿಸಿಟ್ಟ ಜೈಲನ್ನು ಹುಡುಕಿದ, ಸಂಶೋಧಿಸಿದ ರೀತಿ–ನೀತಿಗಳನ್ನು ಸಂಶೋಧಕರು ವಿವರಿಸುತ್ತಾರೆ. ಅದರೊಂದಿಗೆ ಸಂಶೋಧಕರು ಇಡೀ ಜೈಲಿನ ಸುತ್ತಮುತ್ತಲಿನ ಪರಿಸರದ ಹಲವಾರು ಸಂಗತಿಗಳ ಮೇಲೆ ತಮ್ಮ ಅನುಭವದ ಅಧ್ಯಯನದ ಬೆಳಕನ್ನು ಚೆಲ್ಲಿದ್ದಾರೆ

ಹಿರಿಯ ಸಂಶೋಧಕರಾದ ಡಾ.ಶರಣಬಸಪ್ಪ ಕೋಲ್ಕಾರ್ ತಮ್ಮ ಸಂಶೋಧನೆಯನ್ನು ನಿರಂತರವಾಗಿಟ್ಟಿರುವುದರಿಂದ ಇತಿಹಾಸದಲ್ಲಿನ ಈ ಭಾಗದ ಸ್ಥಳಗಳ ಕುರಿತಾದ ಸಮಗ್ರ ಹಾಗೂ ಖಚಿತ ಮಾಹಿತಿಯನ್ನು ಹೊಂದಿದ್ದಾರೆ. ಇಂಥಹ ಹಿರಿಯ ಸಂಶೋಧಕರಿಂದ ಸಂಶೋಧಿಸಲ್ಪಟ್ಟ ಈ ಎರಡು ಸ್ಥಳಗಳು ನಾಡಿನ ಇತಿಹಾಸದ ಮೇಲೆ ಮತ್ತಷ್ಟು ಹೊಸ ಬೆಳಕನ್ನು ಚೆಲ್ಲಬಹುದು ಎನ್ನುವ ನಿರೀಕ್ಷೆಯಿದೆ.

ಇಲ್ಲಿಯ ಸಂಶೋಧನೆಗಳಿಂದ ಮತ್ತಷ್ಟು ಹೊಸ ಸಂಶೋಧನೆಯಾಗಬಹುದೆನ್ನುವ ನಿರೀಕ್ಷೆ ಸಂಶೋಧಕರದಾಗಿದೆ. ಅದಲ್ಲದೆ ಮುಂಬರುವ ದಿನಗಳಲ್ಲಿ ಈ ಲೇಖನಗಳು ವಿಜಯನಗರ ಕುರಿತ ಅಧ್ಯಯನ ನಡೆಸುವವರಿಗೆ ಮಾರ್ಗದರ್ಶಿಯಾಗಬಲ್ಲದು. ಜಾಗತಿಕ ಇತಿಹಾಸದ ಮೇಲೆ ಹೆಚ್ಚು ಬೆಳಕು ಚೆಲ್ಲುವ ಸಂಶೋಧನಾ ಲೇಖನಗಳು ಪ್ರಕಟಗೊಳ್ಳುತ್ತಿರುವ ಸಂದರ್ಭದಲ್ಲಿ ಪ್ರಾದೇಶಿಕ ಅಥವಾ ಸ್ಥಳೀಯ ಇತಿಹಾಸಗಳ ಮೇಲೆ ಬೆಳಕು ಚೆಲ್ಲುವಂತಹ ಲೇಖನಗಳನ್ನು ಒಳಗೊಂಡ ಪುಸ್ತಿಕೆ ಪ್ರಕಟಿಸುತ್ತಿರುವುದು ಅಭಿನಂದನೀಯ ಸಂಗತಿಯಾಗಿದೆ. ಹಿರಿಯ ಸಂಶೋಧಕರಾದ ಡಾ. ಶರಣಬಸಪ್ಪ ಕೋಲ್ಕಾರ ಇವರ ನಿರಂತರ ಪ್ರಯತ್ನದ ಫಲವಾಗಿ ಹೊರಹೊಮ್ಮಿದ ಎರಡು ಸಂಶೋಧನಾ ಲೇಖನಗಳನ್ನು ಒಟ್ಟುಗೂಡಿಸಿ ಕೃತಿಯ ರೂಪದಲ್ಲಿ ಪ್ರಕಟಿಸುತ್ತಿರುವ ಪ್ರಕಾಶಕರಿಗೆ ಅಭಿನಂದನೆಗಳು.

ಇತಿಹಾಸದಲ್ಲಿನ ಮರೆಮಾಚಿದ ಸಂಗತಿಗಳು ಕಿರಿಯರಿಗೂ ಲಭ್ಯವಾಗಲಿ ಎನ್ನುವ ಸದುದ್ದೇಶದಿಂದ ತಮ್ಮ ಮನೆತನದ ಹಿರಿಯರ ಸ್ಮರಣೆಗಾಗಿ ಈ ಗ್ರಂಥದ ದಾನಿಗಳಾದ ಹಿರಿಯ ಸಾಹಿತಿಗಳಾದ ಡಾ. ಮಹಾಂತೇಶ ಮಲ್ಲನಗೌಡರವರಿಗೆ ವಿಶೇಷ ಅಭಿನಂದನೆಗಳು.

ಈ ಭಾಗದ ಇನ್ನೋರ್ವ ಸಂಶೋಧಕರಾದ ಡಾ. ಸಿದ್ದಲಿಂಗಪ್ಪ ಕೊಟ್ನೆಕಲ್ ಅವರು ಬೆನ್ನುಡಿಯನ್ನು ಬರೆದು ಕೃತಿ ಹಾಗೂ ಕೃತಿಕಾರರ ಕಿರು ಪರಿಚಯಗೈದಿದ್ದಾರೆ ಅವರಿಗೂ ವಂದನೆಗಳು. ತಮ್ಮ ಸಂಶೋಧನಾ ಹಿರಿತನದಿಂದ ಈ ಭಾಗದ ಹತ್ತು ಹಲವಾರು ಐತಿಹಾಸಿಕ ಸಂಗತಿಗಳ ಮೇಲೆ ಲೇಖನಗಳನ್ನು ನಿರಂತರವಾಗಿ ಪ್ರಕಟಿಸಿ ಜಗತ್ತಿಗೆ ಪರಿಚಯಿಸುತ್ತಿರುವ ಡಾ. ಶರಣಬಸಪ್ಪ ಕೋಲ್ಕಾರರವರಿಗೆ ಮತ್ತೊಮ್ಮೆ ಅಭಿನಂದನೆಗಳನ್ನು ಸಲ್ಲಿಸುತ್ತಾ, ಇವರ ನಿರಂತರ ಸಂಶೋಧನೆಗಳು ಮುಂಬರುವ ಕಿರಿಯ ಸಂಶೋಧಕರಿಗೆ ಮಾರ್ಗದರ್ಶಿಯಾಗಲಿ, ನಾಡಿನ ಇತಿಹಾಸದ ಮೇಲೆ ಹೊಸ ಬೆಳಕನ್ನು ಚೆಲ್ಲಲಿ ಎಂದು ಆಶಿಸುತ್ತೇನೆ.

–ಪ್ರೊ. ಶರಣಬಸಪ್ಪ ಚ. ಬಿಳೆಯಲಿ
ಅರ್ಥಶಾಸ್ತ್ರದ ಸಹಾಯಕ ಪ್ರಾಧ್ಯಾಪಕರು,
ಶ್ರೀ ಗವಿಸಿದ್ದೇಶ್ವರ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಮಹಾವಿದ್ಯಾಲಯ ಕೊಪ್ಪಳ

ಲೇಖಕರ ಮಾತು

ಆನೆಗೊಂದಿ ನಮ್ಮ ನಾಡಿನ ಅತ್ಯಂತ ಮಹತ್ವದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ನೆಲೆಯಾಗಿದೆ. ಸುಮಾರು 5000 ವರ್ಷಗಳ ಹಿಂದಿನಿಂದಲೂ ಅದು ಮಾನವನ ಚಟುವಟಿಕೆಯ ನೆಲೆಯಾಗಿರುವುದು ಅಲ್ಲಿಯ ಸಂಶೋಧನೆಗಳಿಂದ ದೃಢಪಟ್ಟಿದೆ. ಕಡೆ ಬಾಗಿಲಿನಲ್ಲಿ ನಡೆದ ಉತ್ಖನನಗಳಿಂದ ಆನೆಗೊಂದಿಯಲ್ಲಿ ಇದ್ದ ಬಹು ಪ್ರಾಚೀನ ಕೃಷಿಕ ಪಶುಪಾಲಕ ಆರ್ಥಿಕ ವ್ಯವಸ್ಥೆಯ ಚಿತ್ರಣ ಬೆಳಕಿಗೆ ಬಂದಿದೆ. ಆನೆಗೊಂದಿಯ ಗವಿ ಕಲ್ಲಾಸರೆಗಳ ಆದಿಮ ಚಿತ್ರಗಳು ಇಲ್ಲಿದ್ದ ಮಾನವನ ಜೀವನ ಸಂಸ್ಕೃತಿಯ ಚಿತ್ರಣವನ್ನು ಕಟ್ಟಿಕೊಡುತ್ತವೆ. ಅದೇ ರೀತಿ ಪೌರಾಣಿಕವಾಗಿ ಆನೆಗೊಂದಿ ಪಂಪಾಕ್ಷೇತ್ರವೆಂದು ಸ್ಕಂದಪುರಾಣದಲ್ಲಿ ವರ್ಣಿಸಲ್ಪಟ್ಟಿದೆ. ಭಾರತ ದೇಶದ ಪ್ರಾಚೀನ ಮಹಾಕಾವ್ಯವಾದ ರಾಮಾಯಣದಲ್ಲಿ ಉಲ್ಲೇಖವಿರುವ ವಾನರ ರಾಜ್ಯ ಕಿಷ್ಕಿಂದ ಇದೇ ಆನೆಗೊಂದಿ ಪ್ರದೇಶವೆಂದು ಗುರುತಿಸಲಾಗಿದೆ. ಚಾರಿತ್ರಿಕ ಕಾಲದಲ್ಲಿ ಕಲ್ಯಾಣ ಚಾಲುಕ್ಯ, ಕಾಕತೀಯ, ಕುಮ್ಮಟದ ಅರಸರ ಆಳ್ವಿಕೆಗೆ ಒಳಗಾಗಿದ್ದ ಆನೆಗೊಂದಿಯಲ್ಲಿ ಆಯಾಕಾಲದ ಅನೇಕ ಸ್ಮಾರಕಗಳಿವೆ. 1336ರಲ್ಲಿ ಸಂಗಮ ಸಹೋದರರಾದ ಹರಿಹರ ಬುಕ್ಕರು ವಿಜಯನಗರ ಸಾಮ್ರಾಜ್ಯಕ್ಕೆ ಅಸ್ಥಿಭಾರವನ್ನು ಹಾಕಿದ್ದು ಈ ಆನೆಗೊಂದಿಯಲ್ಲಿ ಎಂಬುದು ಆನೆಗೊಂದಿಯ ಭೌಗೋಳಿಕ ಮತ್ತು ಚಾರಿತ್ರಿಕ ಆಯಕಟ್ಟಿಗೆ ಸಾಕ್ಷಿಯಾಗಿದೆ. ವಿಜಯನಗರದ ಪತನಾನಂತರ ಅರವೀಡು ವಂಶಸ್ಥರು ಇಲ್ಲಿ ಪುನಃ ನರಪತಿ ಸಂಸ್ಥಾನವನ್ನು ಕಟ್ಟಿಕೊಂಡು 1948ರ ವರೆಗೂ ಆಡಳಿತವನ್ನು ನಡೆಸಿದರು. ಹೀಗೆ ಸುದೀರ್ಘ ಚಾರಿತ್ರಿಕ ಪರಂಪರೆಯನ್ನು ಹೊಂದಿರುವ ಆನೆಗೊಂದಿಯಲ್ಲಿ ಅನೇಕ ಕೋಟೆಗಳು, ಸ್ಮಾರಕಗಳು, ಶಿಲ್ಪಗಳು, ಶಾಸನಗಳು ನಿಷಧಿಗಳು ಇವೆ, ಅವೆಲ್ಲಾ ಆನೆಗೊಂದಿ ಪ್ರದೇಶದ ಸಮೃದ್ಧ ಚರಿತ್ರೆ ಮತ್ತು ಪರಂಪರೆಗೆ ಸಾಕ್ಷಿಯಾಗಿದೆ. ಆನೆಗೊಂದಿಯ ಎರಡು ವಿಶಿಷ್ಟ ಸ್ಮಾರಕಗಳಲ್ಲಿ 64 ಕಂಬಗಳ ಮಂಟಪ ಮತ್ತು ಜಿಂಜರ್ ಬೆಟ್ಟದ ಕೋಟೆ ಅದರ ಒಳಗಿನ ಕಟ್ಟಡದ ಅವಶೇಷಗಳು ಮಹತ್ವದ್ದಾಗಿವೆ. ಎರಡು ಕಟ್ಟಡಗಳು ವಿಜಯನಗರದ ಚರಿತ್ರೆಯಲ್ಲಿ ಬಹುಮುಖ್ಯ ಸ್ಥಾನವನ್ನು ಹೊಂದಿರುವ ಸಂಗತಿ ಸ್ಥಳೀಯವಾಗಿ ಪ್ರಚಲಿತವಾಗಿರುವ ಮೌಖಿಕ ಹೇಳಿಕೆಗಳಲ್ಲಿ ಇವೆ. ಆ ಮೌಖಿಕ ಹೇಳಿಕೆಗಳೆಂದರೆ 64 ಕಂಬಗಳ ಮಂಟಪವನ್ನು ಕೃಷ್ಣದೇವರಾಯರ ಸಮಾಧಿ ಎಂದು ಮತ್ತು ಜಿಂಜರ್ ಬೆಟ್ಟದ ಕೋಟೆಯನ್ನು ಬೆಂಗಳೂರಿನ ಸ್ಥಾಪಕ ಕೆಂಪೇಗೌಡ ಬಂಧನದಲ್ಲಿದ್ದ ಸೆರೆಮನೆ ಎಂಬ ಈ ಹೇಳಿಕೆಗಳು ಪ್ರಾಚೀನ ಕಾಲದಿಂದಲೇ ರೂಢಿಯಲ್ಲಿವೆ. ಸಾಮಾನ್ಯವಾಗಿ ಮೌಖಿಕ ಪರಂಪರೆ ಚರಿತ್ರೆಯ ಯಾವುದೋ ಒಂದು ಎಳೆಯ ಆಧಾರದ ಮೇಲೆ ಬೆಳೆದುಬಂದಿರುತ್ತದೆ, ಆ ಹಿನ್ನೆಲೆಯಲ್ಲಿ ಲಿಖಿತ ದಾಖಲೆಗಳು ಇಲ್ಲ ಎಂಬ ಕಾರಣಕ್ಕೆ ಮೌಖಿಕ ಪರಂಪರೆಯಲ್ಲಿ ಅಡಗಿರುವ ಚರಿತ್ರೆಯನ್ನು ನಿರಾಕರಿಸುವಂತಿಲ್ಲ. ನಮ್ಮ ದೇಶದ, ನಮ್ಮ ನಾಡಿನ ಚರಿತ್ರೆಯ ಅನೇಕ ಸಂಗತಿಗಳನ್ನು ನಾವು ಮೌಖಿಕ ಪರಂಪರೆ ಹಿನ್ನೆಲೆಯಲ್ಲಿ ಪರಿಭಾವಿಸಿಕೊಂಡಿದ್ದೇವೆ. ಅದೇ ರೀತಿ ಆನೆಗೊಂದಿಯ ಈ ಎರಡೂ ಸ್ಮಾರಕಗಳ ಕುರಿತು ಪ್ರಚಲಿತವಿರುವ ಮೌಖಿಕ


ಹೇಳಿಕೆಗಳ ಜಾಡು ಹಿಡಿದು ನಾನು ಸುಮಾರು ವರ್ಷಗಳ ಅಧ್ಯಯನವನ್ನು ನಡೆಸಿ ಬೇರೆ ಬೇರೆ ಆಯಾಮಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿ ಆ ಎರಡೂ ಸ್ಮಾರಕಗಳು ಹೇಗೆ ಚಾರಿತ್ರಿಕ ಸತ್ಯವನ್ನು ಪ್ರತಿಬಿಂಬಿಸುತ್ತವೆ ಎಂಬುದನ್ನು ಪ್ರತ್ಯೇಕ ಎರಡು ಲೇಖನಗಳಲ್ಲಿ ಚರ್ಚಿಸಿ ಪ್ರತಿಪಾದಿಸಿದ್ದೇನೆ. ಇಲ್ಲಿಯ ಚರ್ಚೆ ಮತ್ತು ಪ್ರತಿಪಾದನೆಗಳನ್ನು ನನ್ನ 35 ವರ್ಷಗಳ ಸಂಶೋಧನೆಯ ಅನುಭವದ ಹಿನ್ನೆಲೆಯಲ್ಲಿ ಮಾಡಿದ್ದೇನೆ. ಹಾಗಾಗಿ ನನ್ನ ಈ ತೀರ್ಮಾನಗಳು ನನ್ನ ಮಟ್ಟಿಗೆ ವಾಸ್ತವವೆನಿಸಿದರೂ ಮುಂದಿನ ಸಂಶೋಧನೆ ಹಾಗೂ ಅಭಿಪ್ರಾಯಗಳಿಗೆ ಸ್ವಾಗತ ಇದ್ದೇ ಇದೆ. ಈ ಲೇಖನಗಳನ್ನು ಪತ್ರಿಕೆಗಳಲ್ಲಿ ಓದಿ ಎಲ್ಲರಿಗೂ ತಿಳಿಯುವಂತಾಗಲಿ, ಕಿರುಹೊತ್ತಿಗೆ ರೂಪದಲ್ಲಿ ಪ್ರಕಟವಾಗಲಿ ಎಂಬ ಕಾಳಜಿಯನ್ನು ವಹಿಸಿ ಪ್ರಕಟಣೆಗೆ ಮುಂದಾದವರು ನಮ್ಮ ಜಿಲ್ಲೆಯ ಹಿರಿಯ ಹೆಮ್ಮೆಯ ಕವಿಗಳು, ಸಾಹಿತಿಗಳು ಆದ ಡಾ. ಮಹಾಂತೇಶ್ ಮಲ್ಲನಗೌಡರ ಸರ್ ಅವರು. ಜಿಲ್ಲೆಯ ಚರಿತ್ರೆ ಬಗೆಗೆ, ಸ್ಮಾರಕಗಳ ಬಗೆಗೆ ಅಪಾರ ಅಭಿಮಾನ ಮತ್ತು ಕಾಳಜಿಯನ್ನು ಹೊಂದಿರುವ ಇವರು ಅವುಗಳ ರಕ್ಷಣೆಗಾಗಿ ನಿರಂತರವಾಗಿ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚಿಸುತ್ತಾ ಬರುತ್ತಿದ್ದಾರೆ. ಇತಿಹಾಸಕ್ಕೆ ಸಂಬಂಧಿಸಿದ ಯಾವುದಾದರೂ ವಿಶೇಷ ಸುದ್ದಿಗಳಿದ್ದರೆ ಅದನ್ನು ಸೋಶಿಯಲ್ ಮೀಡಿಯಾ ಮೂಲಕ ಹಂಚಿಕೊಳ್ಳುತ್ತಾ ತಮ್ಮ ಇತಿಹಾಸ ಪ್ರೇಮವನ್ನು ವ್ಯಕ್ತಪಡಿಸುತ್ತಾ ಬಂದಿದ್ದಾರೆ. ಅದೇ ರೀತಿ ಚರಿತ್ರೆಗೆ ಸಂಬಂಧಿಸಿದ ಯಾವುದೇ ವಿಷಯಗಳಿದ್ದರೂ ನನ್ನೊಂದಿಗೆ ನಿರಂತರವಾಗಿ ಚರ್ಚಿಸುತ್ತಾ ನನ್ನ ಸಂಶೋಧನೆಗಳನ್ನು ಪ್ರೋತ್ಸಾಹಿಸುತ್ತಾ, ಅಭಿಮಾನಪಡುತ್ತಾ ಬಂದಿದ್ದಾರೆ. ಅವರ ಪ್ರೀತಿ ಮತ್ತು ಕಾಳಜಿಗೆ ನಾನು ಯಾವತ್ತೂ ಕೃತಜ್ಞನಾಗಿದ್ದೇನೆ. ಜ್ಞಾನದಾಸೋಹಿಗಳಾಗಿ ಈ ಬುಕ್‌ಲೆಟ್ ಪ್ರಕಟಣೆಗೆ ಕಾರಣರಾದ ಡಾ. ಮಹಾಂತೇಶ ಮಲ್ಲನಗೌಡರ ಅವರಿಗೆ ಋಣಿಯಾಗಿದ್ದೇನೆ. ಇದರ ಪ್ರಕಟಣೆಗೆ ಆಸಕ್ತಿವಹಿಸಿದ ಸಂಶೋಧನಾ ಸಾಥಿಗಳು ಹಾಗೂ ಬೆನ್ನುಡಿ ಬರೆದ ಡಾ. ಸಿದ್ದಲಿಂಗಪ್ಪ ಕೊಟ್ನೆಕಲ್ ಅವರಿಗೆ, ಮುನ್ನುಡಿ ಬರೆದ ಪ್ರೊ. ಶರಣಬಸಪ್ಪ ಬಿಳೆಎಲೆಯವರಿಗೆ, ಡಿ.ಟಿ.ಪಿ ಮಾಡಿದ ಮಂಜುನಾಥ ವಣಗೇರಿಯವರಿಗೆ, ಮುದ್ರಿಸಿದ ಕೊಪ್ಪಳದ ಐಶ್ವರ್ಯ ಪ್ರಿಂಟಿಂಗ್ ಪ್ರೆಸ್‌ನವರಿಗೂ ಕೃತಜ್ಞತೆಗಳು.

–ಡಾ. ಶರಣಬಸಪ್ಪ ಕೋಲ್ಕಾರ

ಗಂಗಾವತಿ

ಆನೆಗೊಂದಿಯ 64 ಕಂಬಗಳ ಮಂಟಪ

ಕೃಷ್ಣದೇವರಾಯನ ಸಮಾಧಿ ಸ್ಮಾರಕವೇ ಒಂದು ಚರ್ಚೆ





ಕನ್ನಡ ನಾಡಿನ ವಿಶಿಷ್ಟ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ತಾಣ ಆನೆಗೊಂದಿ. ವಿಶ್ವದ ಚರಿತ್ರೆಯಲ್ಲಿ ರಾಜಕೀಯ ಹಾಗೂ ಸಾಂಸ್ಕೃತಿಕ ಶ್ರೇಷ್ಠತೆಯಿಂದ ವಿಶಿಷ್ಟಸ್ಥಾನ ಪಡೆದಿರುವ ವಿಜಯನಗರ ಸಾಮ್ರಾಜ್ಯದ ಮೊದಲ ರಾಜಧಾನಿಯಾಗಿ ಆನೆಗೊಂದಿ ಆ ವೈಭವಕ್ಕೆ ನಾಂದಿ ಹಾಡಿದ ಹೆಗ್ಗಳಿಕೆಗೆ ಪಾತ್ರವಾಗಿದೆ. ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನಲ್ಲಿರುವ ಆನೆಗೊಂದಿ ಗ್ರಾಮ ಹಂಪಿಗೆ ಅಭಿಮುಖವಾಗಿ ತುಂಗಭದ್ರಾ ನದಿಯ ಎಡತೀರದ ಮೇಲೆ ಇದೆ.

ಕುಂಜರ ಕೋಣ, ಭಾಸ್ಕರ ಕ್ಷೇತ್ರ, ದಕ್ಷಿಣ ವಾರಣಾಸಿ, ಹಸ್ತಿನಾವತಿ, ಆನೆಗುಂದಿ ಎಂದು ಶಾಸನಗಳಲ್ಲಿ ಕರೆಯಲ್ಪಟ್ಟ ಆನೆಗೊಂದಿ ಬೆಟ್ಟ ಗುಡ್ಡಗಳ ನಡುವೆ ವಿಸ್ತರಿಸಿದೆ.

ಇಲ್ಲಿಯ ಕಡೇಬಾಗಿಲು ಬೆಟ್ಟದಲ್ಲಿ ನಡೆದ ಉತ್ಖನನ ಹಾಗೂ ಆನೆಗೊಂದಿಯ ಸುತ್ತಲಿನ ಬೆಟ್ಟಗಳ ಗವಿಕಲ್ಲಾಸರೆಗಳಲ್ಲಿ ಕಂಡುಬಂದಿರುವ ಗವಿಚಿತ್ರಗಳು ಈ ಪ್ರದೇಶ ಸು. 5000 ವರ್ಷಗಳ ಹಿಂದಿನಿಂದಲೂ ಮಾನವನ ಚಟುವಟಿಕೆಯ ತಾಣವಾಗಿತ್ತು ಎನ್ನುವುದನ್ನು ಬಿಂಬಿಸುತ್ತವೆ.

ಆನೆಗೊಂದಿ ಪೌರಾಣಿಕ ಹಿನ್ನೆಲೆಯನ್ನು ಹೊಂದಿದೆ. ಸ್ಕಂದಪುರಾಣದಲ್ಲಿನ ವಿವರದಂತೆ ಇದು ಪಂಪಾಂಬಿಕೆಯ ಮೂಲ ನೆಲೆ. ಆಕೆ ಇಲ್ಲಿಯ ಸರೋವರದ ಬಳಿಯೇ ಶಿವನ ಕುರಿತು ತಪಗೈದು ಆತನನ್ನು ಒಲಿಸಿಕೊಂಡಳು. ಆಕೆ ತಪಗೈದ ಸ್ಥಳವೇ ಇಲ್ಲಿನ ಪಂಪಾಸರೋವರ. ಇನ್ನು ರಾಮಾಯಣ ಕಾವ್ಯದಲ್ಲಿ ಈ ಪ್ರದೇಶದ ಉಲ್ಲೇಖವಿದೆ. ಅದರನ್ವಯ ಇದು ವಾನರರ ರಾಜ್ಯ ಕಿಷ್ಕಿಂದೆ. ವಾಲಿ, ಸುಗ್ರೀವರು ಇಲ್ಲಿಯೇ ಆಳುತ್ತಿದ್ದರು. ಇಲ್ಲಿಯ ಅಂಜನಾದ್ರಿ ಬೆಟ್ಟವೇ ಆಂಜನೇಯನ ಜನ್ಮಸ್ಥಳ. ವಾಲ್ಮೀಕಿ ರಾಮಾಯಣದ ಕಥಾನಕದ ಪ್ರಕಾರ ಕಿಷ್ಕಿಂದಾ ಕಾಂಡ, ಸುಂದರ ಕಾಂಡದ ಘಟನೆಗಳು ಇಲ್ಲಿಯೇ ಜರುಗಿವೆ.

ಕ್ರಿ.ಶ 1336ರಲ್ಲಿ ಸಂಗಮನ ಮಕ್ಕಳಾದ ಹರಿಹರ ಬುಕ್ಕರು ಆನೆಗೊಂದಿಯಲ್ಲಿಯೇ ವಿಜಯನಗರ ಸಾಮ್ರಾಜ್ಯಕ್ಕೆ ಅಸ್ಥಿಭಾರ ಹಾಕಿದರು. ಕೆಲಕಾಲ ಆನೆಗೊಂದಿಯೇ ರಾಜಧಾನಿಯಾಗಿತ್ತು. 1565ರಲ್ಲಿ ವಿಜಯನಗರ ಪತನಾನಂತರ ಪೆನುಗೊಂಡ, ಚಂದ್ರಗಿರಿ, ವೆಲ್ಲೂರುಗಳಿಂದ ಸುಮಾರು 100 ವರ್ಷಗಳ ಕಾಲ ಅರವೀಡು ವಂಶಸ್ಥರು ಆಡಳಿತ ನಡೆಸಿದರು. 1646ರಲ್ಲಿ ಗೋಲ್ಕಂಡ, ಬಿಜಾಪುರಗಳು ವೆಲ್ಲೂರಿನ ಮೇಲೆ ನಡೆಸಿದ ದಾಳಿಯಿಂದಾಗಿ ವಿಜಯನಗರ ಅಕ್ಷರಶಃ ಹಸ್ತಂಗತವಾಯಿತು. ಈ ವಂಶದ ತಿರುಮಲರಾಯ ಆನೆಗೊಂದಿಗೆ ಬಂದು 1657ರಲ್ಲಿ ನರಪತಿ ಸಂಸ್ಥಾನವೆಂಬ ಹೆಸರಿನಲ್ಲಿ ಆಡಳಿತ ನಡೆಸಿದರು. ಅವನ ನಂತರ ಉತ್ತರಾಧಿಕಾರಿಗಳು 1948ರ ವರೆಗೂ ಆಡಳಿತ ನಡೆಸಿದರು.[1]

ಆನೆಗೊಂದಿಯ ಸ್ಮಾರಕಗಳು:

ಸುದೀರ್ಘ ರಾಜಕೀಯ ಪರಂಪರೆಯನ್ನು ಹೊಂದಿರುವ ಆನೆಗೊಂದಿ ಹಾಗೂ ಸುತ್ತಲಿನ ಪ್ರದೇಶದಲ್ಲಿ ಕೋಟೆ, ಕೊತ್ತಲಗಳು, ದೇವಾಲಯಗಳು, ಮಠಗಳು, ಬಸದಿ, ಸಮಾಧಿಗಳು, ಬಾವಿಗಳು, ಅಣೆಕಟ್ಟು, ಕಾಲುವೆ, ಮಂಟಪಗಳು ಮತ್ತಿತರ ಹತ್ತು ಹಲವಾರು ಸ್ಮಾರಕಗಳಿವೆ. ಈ ಸ್ಮಾರಕಗಳನ್ನು ಕಾಲಮಾನದ ದೃಷ್ಟಿಯಿಂದ ವಿಜಯನಗರ ಪೂರ್ವದ, ವಿಜಯನಗರ ಕಾಲದ ಹಾಗೂ ವಿಜಯನಗರೋತ್ತರ (ಆನೆಗೊಂದಿ ನರಪತಿ ಸಂಸ್ಥಾನದ ಕಾಲ) ಕಾಲದವೆಂದು ವಿಭಾಗಿಸಬಹುದು.

ವಿಜಯನಗರ ಪೂರ್ವದ ಸ್ಮಾರಕಗಳಲ್ಲಿ ಚಂಚಲಕೋಟೆ. ಅದರೊಳಗಿನ ನಾಗನಾಥ ದೇವಾಲಯ, ಗಣೇಶ ದೇವಾಲಯ, ಅಂಜನಹಳ್ಳಿಯ ಪಂಪಾಪತಿ ದೇವಾಲಯಗಳು ಪ್ರಧಾನವಾಗಿದ್ದರೆ, ಋಷ್ಯಮುಖದ ಚಂದ್ರಮೌಳೇಶ್ವರ, ರಂಗನಾಥ, ಗವಿರಂಗನಾಥ, ವೀರಭದ್ರ, ಬಸದಿ, ಮಲ್ಲೇಶ್ವರ, ಆಂಜನೇಯ, ಮುಕ್ತಿ ನರಸಿಂಹ

ದೇವಾಲಯಗಳು, 64 ಕಂಬಗಳ ಮಂಟಪ ವಿಜಯನಗರ ಕಾಲದವುಗಳಾಗಿವೆ. ಗಗನಮಹಲ್, ಲಕ್ಷ್ಮೀಮಹಲ್, ಅರಮನೆ, ಲಕ್ಷ್ಮೀನಾರಾಯಣ ದೇವಾಲಯ, ಗಂಗಾಪರಮೇಶ್ವರಿ ದೇವಾಲಯಗಳು ವಿಜಯನಗರೋತ್ತರ ಕಾಲದವುಗಳಾಗಿವೆ.[2]

ಈ ಎಲ್ಲಾ ಸ್ಮಾರಕಗಳಲ್ಲಿ 64 ಕಂಬಗಳ ಮಂಟಪವನ್ನು ವಿಜಯನಗರ ಸಾಮ್ರಾಜ್ಯದ ಪ್ರಸಿದ್ಧ ದೊರೆ ಕೃಷ್ಣದೇವರಾಯನ ಸಮಾಧಿ ಎಂಬ ನಂಬಿಕೆ ಆನೆಗೊಂದಿ ಭಾಗದಲ್ಲಿದೆ. ಮೌಖಿಕ ಪರಂಪರೆಯಾಗಿ ಬಂದಿರುವ ಈ ನಂಬಿಕೆಯ ಕುರಿತಾಗಿ ಇಲ್ಲಿ ವಿವೇಚಿಸಿ ಚರ್ಚಿಸಲಾಗಿದೆ.

64 ಕಂಬಗಳ ಮಂಟಪ:

64 ಕಂಬಗಳ ಮಂಟಪವು ಆನೆಗೊಂದಿ ಗ್ರಾಮದ ಪೂರ್ವದ ಅಂಚಿನಲ್ಲಿ ಹರಿಯುತ್ತಿರುವ ತುಂಗಭದ್ರಾ ನದಿಯೊಳಗಿನ ಒಂದು ವಿಸ್ತಾರವಾದ ಬಂಡೆಯ ಮೇಲೆ ಇದೆ. ಈ ಮಂಟಪ ನದಿಯ ದಡದಿಂದ ಸು. 100 ಮೀಟರ್ ಅಂತರದಲ್ಲಿದೆ. ಈ ಮಂಟಪದ ಬಳಿಯಿಂದಲೇ ನವವೃಂದಾವನ ನಡುಗಡ್ಡೆಗೆ ಬೋಟ್‌ಗಳ ಮೂಲಕ ತೆರಳಲು ಜಲಮಾರ್ಗವಿದೆ.

ಮಂಟಪವು ಆಯತಾಕಾರದ ತಲವಿನ್ಯಾಸವನ್ನು ಹೊಂದಿದ್ದು, ಉದ್ದಗಲವಾಗಿ ಪ್ರತಿ ಸಾಲಿನಲ್ಲಿ ಎಂಟು x ಎಂಟರಂತೆ (8x8=64) ಒಟ್ಟು 64 ಕಂಬಗಳನ್ನು ಹೊಂದಿದೆ. (ಇಡೀ ಮಂಟಪವು ತೆರೆದಿದ್ದು ಕಂಬಗಳೇ ಪ್ರಧಾನವಾಗಿ ಗೋಚರಿಸುತ್ತವೆ). ಏಳು x ಏಳರಂತೆ ಒಟ್ಟು 49 ಅಂಕಣಗಳನ್ನು ಹೊಂದಿದೆ. ಪ್ರತಿ ಕಂಬಗಳು 7 ಫೀಟ್ 38 ಇಂಚು ಎತ್ತರವಾಗಿದ್ದು, ಚೌಕ ಘನ ಕಾಂಡದವುಗಳಾಗಿವೆ. ಕಂಬಗಳು ಯಾವುದೇ ಕೆತ್ತನೆ ಅಥವಾ ಮಟ್ಟಸವಾಗಿರದ ಒರಟು ಕಂಬಗಳು. ಕಂಬಗಳ ಮೇಲೆ ಚೌಕ ಘನ ಬೋಧಿಗೆಗಳು ಅವುಗಳ ಮೇಲೆ ತೊಲೆಗಳು ಇವೆ. ತೊಲೆಗಳ ಮೇಲೆ ಚಪ್ಪಡಿ ಕಲ್ಲುಗಳ ಛಾವಣಿ ಇದೆ. ಕಂಬ, ಬೋಧಿಗೆ ಹಾಗೂ ಛಾವಣಿಗೆಲ್ಲಾ ಗಾರೆಯ ಲೇಪನವಿದ್ದಿತು. ಆದರೆ ನದಿ ಪ್ರವಾಹ ಬಂದಾಗಲೊಮ್ಮೆ ಮಂಟಪ ಸಂಪೂರ್ಣ ಮುಳುಗಡೆಯಾಗುವುದರಿಂದ ಗಾರೆ ಲೇಪನ ಸಂಪೂರ್ಣ ಉದುರಿದ್ದು, ಅದರ ಕುರುಹು ಮಾತ್ರ ಗೋಚರಿಸುತ್ತವೆ.



ಮಂಟಪವು ಉಪಾನ, ಕಪೋತಗಳನ್ನೊಳಗೊಂಡ 78 ಸೆಂ.ಮೀ ಎತ್ತರದ ಅಧಿಷ್ಠಾನವನ್ನು ಹೊಂದಿದೆ. ಅಧಿಷ್ಠಾನದಲ್ಲಿ ಮೀನು, ಮೊಸಳೆ, ಪಕ್ಷಿಗಳ ಉಬ್ಬು ಶಿಲ್ಪಗಳಿವೆ. ಕಂಬಗಳ ಮೇಲ್ಭಾಗದ ಮಾಡಿನಲ್ಲಿ ನಾಲ್ಕು ಕಡೆ ಇಳಿಜಾರಾದ ಮುಂಜೂರು ಇದೆ. ಈ ವಾಸ್ತು ಲಕ್ಷಣಗಳ ಹಿನ್ನೆಲೆಯಲ್ಲಿ ಇದು ಧಾರ್ಮಿಕ ಕಟ್ಟಡವಾಗಿರದೇ ಲೌಕಿಕ ಕಟ್ಟಡವೆನ್ನುವುದು ಸ್ಪಷ್ಟವಾಗುತ್ತದೆ.[3]

ಕೃಷ್ಣದೇವರಾಯನ ಸಮಾಧಿ/ಸ್ಮಾರಕವೇ?:

ಆನೆಗೊಂದಿಯ ಈ ಮಂಟಪಕ್ಕೆ ಕೃಷ್ಣದೇವರಾಯನ ಸಮಾಧಿ ಎಂದು, ಹಂಪಿಯ ವಿಠ್ಠಲ ದೇವಾಲಯದ ಎದುರು ನದಿ ಮಧ್ಯದಲ್ಲಿರುವ ಕಂಬಗಳ ಮಂಟಪಕ್ಕೆ (ಕಂಬಗಳು ಮಾತ್ರ ಉಳಿದಿವೆ) ಅಚ್ಯುತ ದೇವರಾಯನ ಸಮಾಧಿ ಎಂದು ಹೇಳಲಾಗುತ್ತಿದೆ.[4] ಈ ಹೇಳಿಕೆಗಳು ಸುಮ್ಮನೇ ಸೃಷ್ಟಿಸಿದವು ಅಲ್ಲ. ಮೌಖಿಕವಾಗಿ ಉಳಿದುಬಂದಿರುವ ಇವು ಮೂಲತಃ ಒಂದು ಸತ್ಯ ಸಂಗತಿಯನ್ನು ಸೂಚಿಸುತ್ತವೆ ಎನ್ನುವುದನ್ನು ಚರಿತ್ರೆ ರಚನೆಯ ಸಂದರ್ಭದಲ್ಲಿಯ ಮೌಖಿಕ ಪರಂಪರೆಯು ಪಾತ್ರದ ಹಿನ್ನೆಲೆಯಲ್ಲಿ ಗುರುತಿಸಬಹುದು ಮತ್ತು ಈ ಹೇಳಿಕೆ ತೀರಾ ಇತ್ತೀಚಿನದನಲ್ಲ. ಆ ಹೆಸರು ಪ್ರಾಸಂಗಿಕವಾಗಿ ಕಾಲ ಕಾಲಕ್ಕೆ ದಾಖಲಾಗುತ್ತಾ ಬಂದಿದೆ. 1916 ರಲ್ಲಿ ಆನೆಗೊಂದಿಯ ಶಾಸನಗಳನ್ನು ಪ್ರಕಟಿಸಿದ ಆರ್. ಶ್ಯಾಮಶಾಸ್ತ್ರಿಯವರು ಈ ಮಂಟಪದ ಬಳಿಯ ಒಂದು ಶಾಸನದ ಸ್ಥಳ ನಿರ್ದೇಶನವನ್ನು ಹೇಳುವಾಗ "On a rock of the north east of Krishnaraya Mantapa of Sixty four pillars in the midst of Tungabhadra river where it flows to the north in Anegundi" ಎಂದು ಹೇಳಿದ್ದಾರೆ.[5] ಇದರಿಂದ 1916ಕ್ಕಿಂತ ಮುಂಚಿನಿಂದಲೂ 64 ಕಂಬಗಳ ಮಂಟಪಕ್ಕೆ ಕೃಷ್ಣರಾಯ ಅಥವಾ ಕೃಷ್ಣದೇವರಾಯ ಮಂಪಟವೆಂದು ಕರೆಯುತ್ತಿರುವುದು ಸ್ಪಷ್ಟವಾಗುತ್ತದೆ. ಪ್ರಸ್ತುತ ಸ್ಮಾರಕದ ಬಳಿ ಪ್ರವಾಸೋಧ್ಯಮ ಇಲಾಖೆ ಹಾಗೂ ಹಂಪಿ ಅಭಿವೃದ್ಧಿ ಪ್ರಾಧಿಕಾರ ಹಾಕಿಸಿದ ಮಾಹಿತಿ ಫಲಕದಲ್ಲಿ "ಇದು ಕ್ರಿ.ಶ 1509–1529 ರ ನಡುವೆ ರಾಜ್ಯವಾಳಿದ ಕೃಷ್ಣದೇವರಾಯನ ಸ್ಮರಣಾರ್ಥವಾಗಿ ನಿರ್ಮಿಸಲಾದ ಸ್ಮಾರಕ ಎಂದು ನಂಬಲಾಗಿದೆ......... ಕೃಷ್ಣದೇವರಾಯನು ಕಲೆ ಮತ್ತು ವಾಸ್ತುಶಿಲ್ಪದ ಮಹಾನ್ ಪೋಷಕನಾಗಿದ್ದರಿಂದ ಆತನ ನೆನಪಿಗಾಗಿ ಈ ಮಂಟಪವನ್ನು ನಿರ್ಮಿಸಲಾಗಿದೆ." ಎಂದು ಬರೆಯಲಾಗಿದೆ. ಇಲ್ಲಿ ಎರಡು ಸಂಗತಿಗಳನ್ನು ಅನುಮಾನಾಸ್ಪದವಾಗಿ ಹೇಳಲಾಗಿದೆ. ಮೊದಲನೆಯದಾಗಿ ಇದು ಕೃಷ್ಣದೇವರಾಯನ ಸ್ಮರಣಾರ್ಥವಾಗಿ ನಿರ್ಮಿಸಿರುವುದು ಮತ್ತು ಆತನ ವಿಶಿಷ್ಟ ವ್ಯಕ್ತಿತ್ವವನ್ನು ಸಂಕೇತಿಸಿ ಈ ಮಂಟಪ ನಿರ್ಮಿಸಿರುವುದು ಎಂಬ ಸಂಗತಿಗಳು ಸ್ಪಷ್ಟವಾಗುತ್ತದೆ.



ಮಂಟಪಕ್ಕೆ ಕೃಷ್ಣದೇವರಾಯನ ಸಮಾಧಿ ಎಂದು ಕರೆದಿರುವಲ್ಲಿ ಅದು ಕೃಷ್ಣದೇವರಾಯನ ಅಂತಿಮ ಸಂಸ್ಕಾರಕ್ಕೆ ಸಂಬಂಧಿಸಿರುವುದನ್ನು ಸೂಚಿಸುತ್ತದೆ. ಆ ಸ್ಥಳದಲ್ಲಿ ಅವರ ಕಳೇಬರಕ್ಕೆ ಅಗ್ನಿಸ್ಪರ್ಶ ಮಾಡಲಾಗಿದ್ದು, ತದನಂತರ ಆ ಸ್ಥಳದಲ್ಲಿ ಮಂಟಪವನ್ನು ಕಟ್ಟಿಸಲಾಯಿತು. ಜನಸಾಮಾನ್ಯರು ಅದಕ್ಕೆ ಕೃಷ್ಣದೇವರಾಯನ ಸಮಾಧಿ ಎಂದು ಸಾಮಾನ್ಯ ಪರಿಭಾಷೆಯಲ್ಲಿ ಕರೆದರು. ಆದರೆ ಅದನ್ನು ಕೃಷ್ಣದೇವರಾಯನ ಕಳೇಬರದ ಅಗ್ನಿಸಂಸ್ಕಾರ ಮಂಟಪವೆಂದು ಕರೆಯುವುದು ಸೂಕ್ತ.

ಸಾಧ್ಯತೆಗಳು :

ಆನೆಗೊಂದಿಯ 64 ಕಂಬಗಳ ಮಂಟಪವೇ ಕೃಷ್ಣದೇವರಾಯನ ಅಂತ್ಯಸಂಸ್ಕಾರ ಸ್ಥಳವೆಂದು ಗುರುತಿಸಲು ಮೇಲೆ ಗಮನಿಸಿದಂತೆ ಪರಂಪರಾನುಗತವಾಗಿ ಬಂದ ಹೇಳಿಕೆಯಷ್ಟೆ ಅಲ್ಲ. ಈ ಕೆಳಕಂಡಂತೆ ಕೆಲವು ಸಾಧ್ಯತೆಗಳನ್ನು ಗುರುತಿಸಬಹುದು.

1. **ಕೃಷ್ಣದೇವರಾಯನ ವ್ಯಕ್ತಿತ್ವ ಸಂಕೇತಿಸುವ ಕಟ್ಟಡ:** ಪ್ರಸ್ತುತ ಮಂಟಪವು ಅದರ ಹೆಸರೇ ಸೂಚಿಸುವಂತೆ 64 ಕಂಬಗಳಿಂದ ಕೂಡಿದೆ. ಈ ಕಂಬಗಳು ಕೃಷ್ಣದೇವರಾಯನ ವ್ಯಕ್ತಿತ್ವವನ್ನು ಸೂಚಿಸುತ್ತವೆ ಎನ್ನಲಾಗಿದೆ. ಆತ 64 ಪ್ರಾಚೀನ ವಿದ್ಯೆಗಳಲ್ಲಿ ಪಾರಂಗತನಾಗಿದ್ದನಂತೆ. ಹಾಗಾಗಿ ಒಂದೊಂದು ವಿದ್ಯೆಗೆ ಒಂದೊಂದು ಕಂಬವನ್ನು ಸಂಕೇತಿಸಿ 64 ಕಂಬಗಳನ್ನು ನಿರ್ಮಿಸಲಾಗಿದೆ. ಮೇಲೆ ಗಮನಿಸಿದಂತೆ ಮಂಟಪದ ಕುರಿತಾಗಿ ಪ್ರವಾಸೋಧ್ಯಮ ಇಲಾಖೆಯ ಮಾಹಿತಿ ಫಲಕದಲ್ಲಿ 64 ವಿದ್ಯೆಗಳ ಬಗ್ಗೆ ಉಲ್ಲೇಖಿಸಲಾಗಿದೆ. ಕೃಷ್ಣದೇವರಾಯನ ವ್ಯಕ್ತಿತ್ವ ಕುರಿತಾಗಿ ಆತನ ಅಮುಕ್ತ ಮಾಲ್ಯದ, ರಾಯವಾಚಕ ಮತ್ತು ದಿನಚರಿಯಿಂದ ಸಂಗ್ರಹಿಸಿದ ಕೆಲವು ಅಂಶಗಳನ್ನು ಗುರುಮೂರ್ತಿ ಪೆಂಡಕೂರು ಹೀಗೆ ಹೇಳುತ್ತಾರೆ. "ರಾಯನು ಸ್ವತಃ ವೀಣಾವಾದನ ಪಟುವಾಗಿದ್ದನು. ಸಂಗೀತ ಶಾಸ್ತ್ರದಲ್ಲೂ, ನಾಟ್ಯಶಾಸ್ತ್ರದಲ್ಲೂ ಆಳವಾದ ಪಾಂಡಿತ್ಯ ಅವರದಾಗಿತ್ತು. ದೊಡ್ಡ ಮೊಕದ್ದಮೆಗಳನ್ನು ರಾಯರೇ ವಿಚಾರಿಸಿ ಸಭೆಗಳನ್ನು ಕರೆದು ತೀರ್ಪು ನೀಡುತ್ತಿದ್ದರು. ರಾಯರು ಅರ್ಥಶಾಸ್ತ್ರ ಪರಿಜ್ಞಾನವುಳ್ಳವರಾಗಿದ್ದರು. ಆಡಳಿತಕ್ಕೆ ಒಂದು ಸ್ಪಷ್ಟವಾದ ಅರ್ಥನೀತಿಯನ್ನು, ಉಳಿತಾಯದ ಕಟ್ಟಳೆಯನ್ನು ಮಾಡಿದರು. ಕೃಷ್ಣದೇವರಾಯರು ಸಮರ್ಥ ಸೇನಾನಿ, ಮಹಾವೀರ, ದಕ್ಷ ಆಡಳಿತಗಾರ. ಹೀಗೆ ಯಾವ ರೀತಿಯಲ್ಲಿ ನೋಡಿದರೂ ಕೃಷ್ಣದೇವರಾಯರು ಅನೇಕ ಸಾಮ್ರಾಟರಿಗೆ ಭಿನ್ನವಾಗಿ, ಪರಿಪೂರ್ಣ ಚಕ್ರವರ್ತಿಯೆನಿಸಿ, ಸಾಮ್ರಾಜ್ಯವನ್ನು ಅಭ್ಯುದಯದೆಡೆಗೆ ಹೋಯ್ದು ಅರ್ಥ ವಿಶಾರದನೆನಿಸಿ, ಪ್ರಜಾವತ್ಸಲನಾದ, ಎಲ್ಲರನ್ನೂ ಪ್ರೀತಿಸುವ, ಆದರಿಸುವ ಮನುಷ್ಯನಾಗಿದ್ದನು.[6] ಎಂದು ವಿವರಿಸಿದ್ದಾರೆ. ಕೃಷ್ಣದೇವರಾಯನ ಈ ವ್ಯಕ್ತಿತ್ವ ಗಮನಿಸಿದರೆ ಆತ ಖಂಡಿತ 64 ವಿದ್ಯೆಗಳಲ್ಲಿ ಬಲ್ಲಿದನಾಗಿದ್ದನೆಂದು ಹೇಳಬಹುದು. ಹಾಗಾಗಿ 64 ಕಂಬಗಳ ಮಂಟಪವನ್ನು ನಿರ್ಮಿಸುವುದರ ಮೂಲಕ ಅದು ಕೃಷ್ಣದೇವರಾಯನ ಸ್ಮಾರಕವೆಂದು ಸೂಚಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ನಂಬಿಕೆ ಹಾಗೂ ಹೇಳಿಕೆಯಲ್ಲಿ ಹುರುಳಿಲ್ಲದೇ ಇಲ್ಲ.

2. **ಸ್ಥಳದ ಮಹತ್ವ:** 64 ಕಂಬಗಳ ಮಂಟಪವಿರುವ ಸ್ಥಳ ಅಥವಾ ಭಾಗವು ಮರಣ ಸಂಬಂಧಿತ ಆಚರಣೆಗಳು ಹಾಗೂ ಸಮಾಧಿಗಳ ಪರಂಪರೆಯನ್ನು ಹೊಂದಿದೆ. ಇಲ್ಲಿ ಚಿಂತಾಮಣಿ ಮಠದಿಂದ ತಾರಾ ಪರ್ವತದವರೆಗೆ ತುಂಗಭದ್ರಾ ನದಿ ಸು. 2 ಕಿ.ಮೀ ಉತ್ತರಾಭಿಮುಖ (ಉತ್ತರವಾಹಿನಿ) ವಾಗಿ ಹರಿಯುತ್ತದೆ. ನದಿಯ ಉತ್ತರಾಭಿಮುಖವಾದ ಹರಿವು ಸಾವಿಗೆ ಸಂಬಂಧಿಸಿದ ಆಚರಣೆಗೆ ಅತ್ಯಂತ ಪ್ರಶಸ್ತ ಎಂಬ ನಂಬಿಕೆ ನಮ್ಮ ದೇಶದಲ್ಲಿ ಮೊದಲಿನಿಂದಲೂ ಪ್ರಚಲಿತದಲ್ಲಿದೆ.

ಈ ಹಿನ್ನೆಲೆಯಲ್ಲಿ ತುಂಗಭದ್ರಾ ನದಿಯ 'ಉತ್ತರವಾಹಿನಿ'ಯ ವ್ಯಾಪ್ತಿಯಲ್ಲಿರುವ ಮರಣ ಸಂಬಂಧಿತ ನಂಬಿಕೆ, ಆಚರಣೆ ಹಾಗೂ ಸ್ಮಾರಕ, ಸಮಾಧಿಗಳನ್ನು ಕೆಳಕಂಡಂತೆ ಗಮನಿಸಬಹುದು.

2.1 **ವಾಲಿಯ ಸಂಸ್ಕಾರ ಸ್ಥಳ:** ತುಂಗಭದ್ರಾ ನದಿಯ ಸುತ್ತಲಿನ ಹಂಪಿ-ಆನೆಗೊಂದಿ ಪ್ರದೇಶವನ್ನು ರಾಮಾಯಣ ಕಾವ್ಯದಲ್ಲಿ ಉಲ್ಲೇಖವಾಗಿರುವ ವಾನರರ ರಾಜ್ಯ ಕಿಷ್ಕಿಂದೆ ಎಂದು ಗುರುತಿಸಲಾಗಿದೆ. ಕಿಷ್ಕಿಂದೆಯ ರಾಜನಾಗಿದ್ದ ವಾಲಿಯನ್ನು ರಾಮ ಸಂಹರಿಸಿದ್ದು ಇದೇ ಚಿಂತಾಮಣಿ ಮಠದ ಒಂದು ಭಾಗದಿಂದ ಎನ್ನುವ ಪ್ರತೀತಿ ಇದೆ. ಆ ಸ್ಥಳದಲ್ಲಿ ರಾಮಪಾದಗಳ ಚಿಹ್ನೆ ಹಾಗೂ ಬಿಲ್ಲಿನ ಚಿತ್ರವನ್ನು ಹಾಕಿ ಸೂಚಿಸಲಾಗಿದೆ ಮತ್ತು ವಾಲಿಯನ್ನು ಚಿಂತಾಮಣಿ ಮಠದ ಎದುರಿಗೆ ನದಿಯ ಆಚೆ ದಡದಲ್ಲಿ ಅಗ್ನಿ ಸಂಸ್ಕಾರಗೊಳಿಸಲಾಯ್ತು ಎಂಬ ನಂಬಿಕೆ ಪ್ರಚಲಿತದಲ್ಲಿದೆ. ಆ ಸ್ಥಳಕ್ಕೆ ವಾಲಿದಿಬ್ಬ ಎಂದು ಕರೆಯಲಾಗುತ್ತಿದೆ. (ವಾಸ್ತವಿಕವಾಗಿ ಅದು ನವಶಿಲಾಯುಗದ ಪಶುಪಾಲಕರು ಸೃಷ್ಟಿಸಿದ ಬೂದಿದಿಬ್ಬ)

2.2 **ಸಲ್ಲೇಖನ ವ್ರತಾಚರಣೆಯ ಸ್ಥಳ:** ತುಂಗಭದ್ರಾ ನದಿಯ ಉತ್ತರವಾಹಿನಿಯ ಈ ಭಾಗ ಜೈನರಿಗೂ ಪವಿತ್ರವಾಗಿದ್ದಿತು. ಕೆಲವು ಜೈನರು ಇಲ್ಲಿಗೆ ಬಂದು ಸಲ್ಲೇಖನವ್ರತದ ಮೂಲಕ ಮುಡಿಪಿದ ಸಂಗತಿಯನ್ನು ಇಲ್ಲಿಯ ನಿಷದಿ ಶಾಸನಗಳು ತಿಳಿಸುತ್ತವೆ. ಚಿಂತಾಮಣಿ ಮಠದ ಮುಂದಿನ ಗುಂಡೊಂದರ ಮೇಲಿನ 1357ರ ಕಾಲದ ನಿಷದಿ ಶಾಸನದಲ್ಲಿ ಪ್ರಧಾನೋತ್ತಮ ಬುಳ್ಳರಾಜನ ಪತ್ನಿ ಕಾಳುಬಾಯಿಯು ಸಮ್ಯುಕ್ತ ವೃತ್ತೂರ್ವಕ ಬಾಲಚಂದ್ರ ಯೋಗಿಂದ್ರನ ಪಾದಕಮಲಗಳಲ್ಲಿ ದೀಕ್ಷೆ ಸ್ವೀಕರಿಸಿ ಮುಡುಪಿದುದನ್ನು ತಿಳಿಸುತ್ತದೆ.[7] ಬುಳ್ಳರಾಜ ಯಾರ ಪ್ರಧಾನಿಯೆಂಬುದು ತಿಳಿಯದಿದ್ದರೂ ಅಂತಹ ಗಣ್ಯರ ಪತ್ನಿ ಇಲ್ಲಿಗೆ ಆಗಮಿಸಿ ಮರಣ ಹೊಂದಿರುವುದು ಸ್ಥಳದ ಮಹತ್ವವನ್ನು ಬಿಂಬಿಸುತ್ತದೆ. ಅದೇ ರೀತಿ ಇಲ್ಲಿಯ ಮಹಿಷಾಸುರ ಮರ್ದಿನಿ ದೇವಾಲಯದಲ್ಲಿರುವ ಒಂದು ಶಾಸನ ಅಜನ ಮಗನಾದ ಇಮ್ಮಡಿ ಕಾವದೇವ ಸ್ವರ್ಗಸ್ಥನಾದುದನ್ನು ತಿಳಿಸುತ್ತದೆ.[8] ಇನ್ನು 64 ಕಂಬಗಳ ಮಂಟಪದ ಬಳಿಯಿರುವ 1352ರ ಕಾಲದ ಶಾಸನವು ಶ್ರೀಮದ್ ರಾಯ ರಾಜಗುರು ಮಂಗಳಾಚಾರ್ಯರು ಸ್ವರ್ಗಸ್ಥರಾದುದನ್ನು ತಿಳಿಸುತ್ತದೆ.[9]

2.3 ಚಿಂತಾಮಣಿ ಮಠ, ಮುಕ್ತಿನರಸಿಂಹ ದೇವಾಲಯ ಮತ್ತು ಪಿಂಡಮಂಟಪ: ಚಿಂತಾಮಣಿ ಮಠದಲ್ಲಿ ಹಲವಾರು ದೇವಾಲಯಗಳಿವೆ. ಅವುಗಳಲ್ಲಿ ಮುಕ್ತಿ ನರಸಿಂಹ ದೇವಾಲಯವು ಪ್ರಮುಖವಾಗಿದೆ. ವಿಜಯನಗರ ಸಂಗಮರ ಕಾಲದ ಈ ದೇವಾಲಯದ ಹೆಸರು ಇಲ್ಲಿ ಗಮನಾರ್ಹವಾಗಿದೆ. ನರಸಿಂಹ ದೇವರಿಗೆ 'ಮುಕ್ತಿ' ಎಂಬ ವಿಶೇಷಣ ಸೇರಿಸಲಾಗಿದೆ. ಹಿಂದೂ ಧರ್ಮದ

ಪ್ರಕಾರ ಆತ್ಮವು ಜನನ ಮರಣ ಚಕ್ರದಿಂದ ಬಿಡುಗಡೆ ಹೊಂದುವುದಕ್ಕೆ **'ಮುಕ್ತಿ'** ಎಂದು, ಆದರೆ ಕ್ರಮೇಣ ಸಾವಿಗೂ ಮುಕ್ತಿ ಎಂದೇ ಕರೆಯಲಾಯಿತು. ಈ ಹಿನ್ನೆಲೆಯಲ್ಲಿ ಉತ್ತರವಾಹಿನಿಯಾಗಿರುವ ತುಂಗಭದ್ರೆಯ ಈ ಸ್ಥಳ ಮುಕ್ತಿ ಹೊಂದಲು, ಮುಕ್ತಿ ಪಡೆಯಲು ಬಹು ಪ್ರಶಸ್ತ್ಯ ಸ್ಥಳವಾಗಿದ್ದು, ತತ್‌ಸಂಬಂಧಿತ ಕ್ರಿಯಾ ಆಚರಣೆಗಳನ್ನು ಧಾರ್ಮಿಕತೆಯನ್ನು ನಡೆಸಲು ಸ್ಥಳ ಅಧಿದೈವವಾಗಿ ನರಸಿಂಹನನ್ನು ಪ್ರತಿಷ್ಠಾಪಿಸಿ ಅದಕ್ಕೆ ಮುಕ್ತಿ ನರಸಿಂಹ ಎಂದು ಕರೆಯಲಾಗಿರುವುದನ್ನು ತರ್ಕಿಸಬಹುದು. ನರಸಿಂಹ ದೇವಾಲಯದ ಎದುರಿಗೆ ನದಿ ತೀರದಲ್ಲಿ ವಿಜಯಗರ ಕಾಲದ ಪಿಂಡ ಮಂಟಪವಿದೆ.



ಇಂದಿಗೂ ಜನ ಇಲ್ಲಿ ಅಪರ ಕರ್ಮಾದಿಗಳನ್ನು ನೆರವೇರಿಸುತ್ತಾರೆ.

2.4 **ನವವೃಂದಾವನ :** 64 ಕಂಬಗಳ ಮಂಟಪದಿಂದ ಪೂರ್ವಕ್ಕೆ ಅನತಿ ದೂರದಲ್ಲಿ ನವವೃಂದಾವನ ಎಂಬ ನಡುಗಡ್ಡೆ ಇದೆ. ಅಲ್ಲಿ ಮಾಧ್ವ ಪರಂಪರೆಯ 9 ಯತಿಗಳ ಸಮಾಧಿಗಳಿವೆ. ಆ ಸಮಾಧಿಗಳೆಂದರೆ ಪದ್ಮನಾಭತೀರ್ಥರು (1324), ಜಯತೀರ್ಥರು (1388), ಕವೀಂದ್ರತೀರ್ಥರು (1398), ವಾಗೀಶತೀರ್ಥರು (1406), ಗೋವಿಂದ ಒಡೆಯರು (1534), ವ್ಯಾಸತೀರ್ಥರು (1539), ಶ್ರೀನಿವಾಸತೀರ್ಥರು (1564) ಮತ್ತು ರಾಮತೀರ್ಥರು (1584) ಈ ಎಲ್ಲಾ ಯತಿವರೇಣ್ಯರ ಸಮಾಧಿಗಳಿಂದಾಗಿ ಅದು ನವವೃಂದಾವನ ಎನಿಸಿದೆ.



ಇವರೆಲ್ಲಾ ರಾಘವೇಂದ್ರ ಸ್ವಾಮಿಗಳ ಮಠ, ಉತ್ತರಾಧಿಮಠ ಹಾಗೂ ವ್ಯಾಸರಾಜ ಮಠಗಳಿಗೆ ಸೇರಿದವರು. ಆದಾಗ್ಯೂ ಇವರೆಲ್ಲ ಆನೆಗೊಂದಿಯ ಈ ಸ್ಥಳಕ್ಕೆ ಬಂದು ವೃಂದಾವನಸ್ಥರಾಗಿರುವುದು ಈ ಸ್ಥಳದ ಮಹತ್ವಕ್ಕೆ ಸಾಕ್ಷಿಯಾಗಿದೆ. ಇವರಲ್ಲಿ ವ್ಯಾಸರಾಜರು ಶ್ರೀಕೃಷ್ಣದೇವರಾಯನ ಗುರುಗಳಾಗಿದ್ದರು. ವ್ಯಾಸರಾಯರು ಬದುಕಿದ್ದಾಗಲೇ ಕೃಷ್ಣದೇವರಾಯನು 1529ರಲ್ಲಿ ಮರಣ ಹೊಂದಿದನು. ಪ್ರಾಯಶಃ ವ್ಯಾಸರಾಯರ ಸೂಚನೆ ಮೇರೆಗೆ ಅದಾಗಲೇ ವೃಂದಾವನಸ್ಥರಾಗಿದ್ದ ಪದ್ಮನಾಭತೀರ್ಥರ, ಜಯತೀರ್ಥರ, ಕವೀಂದ್ರತೀರ್ಥರ ಹಾಗೂ ವಾಗೀಶ ತೀರ್ಥರ ವೃಂದಾವನದ ಬಳಿಯಲ್ಲಿಯೇ ಕೃಷ್ಣದೇವರಾಯನ ಅಗ್ನಿಸಂಸ್ಕಾರ ನಡೆದಿರಬಹುದಾದ ಸಾಧ್ಯತೆ ಇಲ್ಲದಿಲ್ಲ.

2.5 **ಆಯುಧ ಪುರುಷ ಸುದರ್ಶನ ಚಕ್ರ ಮಂಟಪ:** 64 ಕಂಬಗಳ ಮಂಟಪದಿಂದ ಈಶಾನ್ಯಕ್ಕೆ ನದಿಯ ಅನತಿ ದೂರದಲ್ಲಿ ಮತ್ತೊಂದು ಬಂಡೆಯ ನಡುಗಡ್ಡೆ ಇದೆ. ಅದರ ಮೇಲೆ ಬಹು ಸುಂದರವಾದ ಅಪರೂಪದ ಆಯುಧ ಪುರುಷ ಸುದರ್ಶನ ಚಕ್ರ ಶಿಲ್ಪವನ್ನೊಳಗೊಂಡ ಮಂಟಪವಿದೆ. ಇಲ್ಲಿ ಚಕ್ರವನ್ನು ಪುರುಷ ರೂಪದಲ್ಲಿ ತೋರಿಸಲಾಗಿದೆ. ಸುದರ್ಶನ ಚಕ್ರವು ವಿಷ್ಣುವಿನ ಒಂದು ಆಯುಧ. ಅಪರಿಮಿತ ಶಕ್ತಿಯನ್ನು ಹೊಂದಿರುವ ಸುದರ್ಶನ ಚಕ್ರವನ್ನು ಶತೃವಿನ ಅಂತಿಮ ಸಂಹಾರಕ್ಕಾಗಿ ಮಾತ್ರ ಉಪಯೋಗಿಸುವಂತಹದು. ಅಂದರೆ ಇದು ಸಂಹಾರ ಅರ್ಥದಲ್ಲಿ ಸಾವನ್ನು ಸಂಕೇತಿಸುತ್ತದೆ. ಇಡೀ ಈ ಪ್ರದೇಶದ ಆಚರಣೆಗೆ ಪೂರಕವಾಗಿ ಈ ಶಿಲ್ಪಮಂದಿರವನ್ನು ಸ್ಥಾಪಿಸಿರಬಹುದು. ಜೊತೆಗೆ ಅಂತಿಮ ಸಂಸ್ಕಾರದ ನಂತರ ಮಾಡುವ ಸ್ನಾನಕ್ಕಾಗಿ ಶಿಲಾ ಹಲಗೆಗಳ ಕೋಣೆಗಳು ಇಲ್ಲಿವೆ.[10] ನವವೃಂದಾವನ ಪಕ್ಕದಲ್ಲಿರುವುದರಿಂದ ವೈಷ್ಣವ ಮಾಧ್ವ ಪರಂಪರೆಯಲ್ಲಿ ಸುದರ್ಶನ ಚಕ್ರ ಮಂಟಪಕ್ಕೆ ವಿಶೇಷ ಮಹತ್ವ ಇದೆ. ಶ್ರಾದ್ಧ ಸಂಬಂಧಿತ ಆಚರಣೆಗಳನ್ನು ಇಲ್ಲಿ ಮಾಡಲಾಗುತ್ತಿತ್ತು. ಈ ಮಂದಿರ ಹಾಗೂ ಶಿಲ್ಪದ ಲಕ್ಷಣಗಳನ್ನು ಅನುಲಕ್ಷಿಸಿ ಇದು ವಿಜಯನಗರ ಪ್ರಬುದ್ಧ ಕಾಲದ ಪ್ರಾಯಶಃ ಕೃಷ್ಣದೇವರಾಯನ ಕಾಲದ ನಿರ್ಮಾಣವೆಂದು ಅಭಿಪ್ರಾಯಪಡಬಹುದು.

2.6 **ನರಪತಿ ಸಂಸ್ಥಾನದ ರಾಜರ ಸಮಾಧಿಗಳು:** ತುಂಗಭದ್ರಾ ನದಿ ಚಿಂತಾಮಣಿ ಮಠದ ಹತ್ತಿರ ಉತ್ತರವಾಹಿನಿಯಾಗಿ ಹರಿಯಲು ಪ್ರಾರಂಭಿಸಿ ತಾರಾಪರ್ವತದ ಬಳಿ ಮತ್ತೇ ಪೂರ್ವಕ್ಕೆ ಹೊರಳುತ್ತದೆ. ನದಿಯ ಪೂರ್ವದ ತಿರುವಿನ ಸನಿಹ ನದಿ ದಂಡೆಯ ಮೇಲೆ ಕೆಲವು ಪ್ರಾಚೀನ ಸಮಾಧಿಗಳಿವೆ. ಅವು ಆನೆಗೊಂದಿಯ 1657 ರಿಂದ 1948ರ ವರೆಗೆ ಆಳಿದ "ವಿದ್ಯಾವಿಜಯನಗರ ನರಪತಿ ಸಂಸ್ಥಾನದ" ರಾಜ ಮನೆತನಕ್ಕೆ ಸೇರಿದವು. ಈ ಮನೆತನದಲ್ಲಿ 17 ಅರಸರು ಆಡಳಿತ ನಡೆಸಿದ್ದಾರೆ.[11] ಈ ಅರಸರ ಪೈಕಿ ಕೆಲವರ ಸಮಾಧಿಗಳು ವಾಲಿಪರ್ವತದ ಮೆಗೋಟೆಯ ಒಳಭಾಗದಲ್ಲಿದ್ದರೆ, ಹೆಚ್ಚಿನ ಸಮಾಧಿಗಳು ಆನೆಗೊಂದಿಯ ಈ ಸ್ಥಳದಲ್ಲಿವೆ. ಈ ಸಮಾಧಿಗಳಲ್ಲಿ ತೀರಾ ಉತ್ತರಕ್ಕೆ ಇರುವುದು ರಾಣಿ ಕುಪ್ಪಮ್ಮನ ಸಮಾಧಿ ಎಂದು ತಿಳಿದುಬರುತ್ತದೆ. ನರಪತಿ ಸಂಸ್ಥಾನದ ಅರಸರು ಕೂಡಾ ತಮ್ಮ ಅಂತ್ಯಸಂಸ್ಕಾರ ಸಮಾಧಿಯನ್ನು ಇದೇ ಸ್ಥಳದಲ್ಲಿ ಮಾಡಿಸಿಕೊಂಡಿರುವುದು ಈ ಸ್ಥಳದ ಮಹತ್ವವನ್ನು ಬಿಂಬಿಸುತ್ತದೆ. ಜೊತೆಗೆ ಚಿಂತಾಮಣಿ ಮಠ ನವವೃಂದಾವನ ದಾರಿಯ ನದಿತೀರದ ಕಟ್ಟೆ ಮತ್ತು ತಾರಾಪರ್ವತದ ಬಂಡೆಯ ಮೇಲೆ ಇರುವ ವೀರಮಾಸ್ತಿಗಲ್ಲುಗಳು ಇದೇ ನದಿ ತೀರದಲ್ಲಿ ಅವರು ಸಂಸ್ಕಾರಗೊಂಡ ಬಗ್ಗೆ ತಿಳಿಸುತ್ತವೆ.


ರಾಣಿ ಕುಪ್ಪಮ್ಮನವರ ಸಮಾಧಿ

ಸಮಾರೋಪ:

ವಿಜಯನಗರದ ಪ್ರಸಿದ್ಧ ಸಾಮ್ರಾಟನಾಗಿದ್ದ ಕೃಷ್ಣದೇವರಾಯನು 17ನೇ ಅಕ್ಟೋಬರ್ 1529ರಂದು ಮರಣ ಹೊಂದಿದನೆಂದು ಇತ್ತೀಚೆಗೆ ದೊರೆತ ತುಮಕೂರು ಜಿಲ್ಲೆಯ ಹೊನ್ನೆನಹಳ್ಳಿ ಶಾಸನದಿಂದ ಸ್ಪಷ್ಟವಾಗಿ ತಿಳಿದುಬಂದಿದೆ.[12] ಆದರೆ ಆತನ ಶವಸಂಸ್ಕಾರವನ್ನು ಎಲ್ಲಿ ಮಾಡಲಾಯಿತೆಂಬುದನ್ನು ತಿಳಿಸುವ ಲಿಖಿತ ದಾಖಲೆಗಳು ಲಭ್ಯವಿಲ್ಲ. ಆದರೆ ವಿಜಯನಗರ ಸಾಮ್ರಾಜ್ಯದ ಮೊದಲ ರಾಜಧಾನಿಯೂ ಹಂಪಿಯ ಒಂದು ಭಾಗವೇ ಆಗಿರುವ ಆನೆಗೊಂದಿಯಲ್ಲಿರುವ 64 ಕಂಬಗಳ ಮಂಟಪವನ್ನು ಕೃಷ್ಣದೇವರಾಯನ ಸಮಾಧಿ/ಸ್ಮಾರಕವೆಂದು ಕರೆಯುತ್ತಾ ಬರಲಾಗಿದೆ. ಹಾಗಾಗಿ ಅದು ಕೃಷ್ಣದೇವರಾಯನ ಅಂತ್ಯಸಂಸ್ಕಾರಗೊಂಡ ಸ್ಥಳವೇ? ಅಂದರೆ ಅಪರೋಕ್ಷವಾಗಿ ಅದು ಆತನ ಸಮಾಧಿಯೇ? ಏಕೆ ಅದಕ್ಕೆ ಕೃಷ್ಣದೇವರಾಯನ ಸಮಾಧಿ ಎಂದು ಕರೆಯಲಾಗಿದೆ. ಅದು ವಾಸ್ತವಿಕವಾಗಿ ರಾಯನ ಸಮಾಧಿಯೇ ಎಂಬ ಪ್ರಶ್ನೆಗಳನ್ನಿರಿಸಿಕೊಂಡು ಇಲ್ಲಿ ಚರ್ಚಿಸಲಾಗಿದೆ.

ಮಂಟಪವಿರುವ ತುಂಗಭದ್ರಾ ನದಿಯ 'ಉತ್ತರವಾಹಿನಿ'ಯ ಆ ಹರಿವಿನ ಮಹತ್ವ ಮತ್ತು 'ಉತ್ತರವಾಹಿನಿ' ಭಾಗದಲ್ಲಿರುವ ಎಲ್ಲಾ ಸ್ಥಳಗಳಾದ ಚಿಂತಾಮಣಿ ಮಠ, ಮುಕ್ತಿ ನರಸಿಂಹ ದೇವಾಲಯ, ನಿಷದಿ ಆಚರಣೆಗಳು, ನವವೃಂದಾವನ ಎಂಬ ಒಂಭತ್ತು ಯತಿ ವರ್ಯರ ಸಮಾಧಿಗಳು, ಸುದರ್ಶನ ಚಕ್ರಮಂದಿರ, ಪಿಂಡ ಮಂಟಪಗಳು, ಶ್ರಾದ್ಧ ಸ್ನಾನ ಕೋಣೆಗಳು, ಆನೆಗೊಂದಿ ನರಪತಿ ಸಂಸ್ಥಾನದ ಸಮಾಧಿಗಳು ಇವೆಲ್ಲವನ್ನು ಪರಿಶೀಲಿಸಲಾಯಿತು. ಎಲ್ಲವೂ ಮುಕ್ತಿ–ಸಾವು–ಸಮಾಧಿ–ಅತ್ಯಸಂಸ್ಕಾರ ಆಚರಣೆಗಳಿಗೆ ಸಂಬಂಧಿಸಿರುವುದು ವ್ಯಕ್ತವಾಯಿತು. ಅಂದರೆ ಆನೆಗೊಂದಿಯ ತುಂಗಭದ್ರೆಯ ಉತ್ತರವಾಹಿನಿಯ ಈ ಪ್ರದೇಶ ವಿಜಯನಗರ ಪೂರ್ವದಿಂದಲೂ, ವಿಜಯನಗರ, ವಿಜಯನಗರೋತ್ತರ ಕಾಲದವರೆಗೂ 'ಮುಕ್ತಿಧಾಮ' ಅಥವಾ 'ಪವಿತ್ರ ಸ್ಮಶಾನ' ವಾಗಿದ್ದಿತು ಎನ್ನುವುದು ವ್ಯಕ್ತವಾಗುತ್ತದೆ. ಈ ಸ್ಥಳದಲ್ಲಿಯ ಸಾವು, ಅತ್ಯಸಂಸ್ಕಾರ–ಸಮಾಧಿಯಾಗುವುದು ಮುಕ್ತಿದಾಯಕ ಎಂಬ ನಂಬಿಕೆ ಬಲವಾಗಿದ್ದಿತು. ಈ ಹಿನ್ನೆಲೆಯಲ್ಲಿ ಕೃಷ್ಣದೇವರಾಯರು ಇಲ್ಲಿಯೇ ತಮ್ಮ ದೇಹಕ್ಕೆ ಅಗ್ನಿಸಂಸ್ಕಾರವಾಗಬೇಕೆಂದು ಬಯಸಿರುವುದನ್ನು ಗ್ರಹಿಸಬಹುದು. ಅವರ ಗುರುಗಳಾದ ವ್ಯಾಸರಾಯರು ಕೃಷ್ಣದೇವರಾಯನ ದೇಹದ ಅಗ್ನಿಸಂಸ್ಕಾರಕ್ಕೆ ಈ ಸ್ಥಳವನ್ನೇ ಸೂಚಿಸಿರಬಹುದು. ಹಾಗಾಗಿ ಕೃಷ್ಣದೇವರಾಯರ ನಿಧನಾನಂತರ ಅವರ ದೇಹವನ್ನು ಆನೆಗೊಂದಿಗೆ ತಂದು ತುಂಗಭದ್ರಾ ನದಿ ತೀರದಲ್ಲಿ ಅಗ್ನಿ ಸಂಸ್ಕಾರಗೊಳಿಸಲಾಯ್ತು. ಆ ಸ್ಥಳದಲ್ಲಿ ಅವರ ಸ್ಮಾರಕವಾಗಿ 64 ಕಂಬಗಳ (ಕೃಷ್ಣದೇವರಾಯರ ಸಮಾಧಿ) ಸ್ಮಾರಕವನ್ನು ಕಟ್ಟಲಾಯಿತು. ಈ ಎಲ್ಲಾ ಸಾಂದರ್ಭಿಕ ಸಂಗತಿಗಳ ವಿವೇಚನೆಯ ಹಿನ್ನೆಲೆಯಲ್ಲಿ ಆನೆಗೊಂದಿಯ 64 ಕಂಬಗಳ ಮಂಟಪವೇ ಜನರು ಹೇಳುವಂತೆ ಕೃಷ್ಣದೇವರಾಯ ಸಮಾಧಿ/ಸ್ಮಾರಕವೆಂದು ಖಚಿತವಾಗಿ ನಿರ್ಧರಿಸಬಹುದು.


(ಹಂಪಿ ಉತ್ಸವ 2023 ರ ಅಂಗವಾಗಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ

ಏರ್ಪಡಿಸಿದ್ದ ವಿಜಯನಗರ ಅಧ್ಯಯನ 26ನೇ ವಾರ್ಷಿಕ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ)

ಆಕರಗಳು :

1. ಶರಣಬಸಪ್ಪ ಕೋಲ್ಕಾರ, 2008, ಆನೆಗೊಂದಿ, ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ವಿಭಾಗ, ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ, ಸೇಡಮ್.
2. ಶರಣಬಸಪ್ಪ ಕೋಲ್ಕಾರ, 2013, ವಿಜಯಗರದ ಮಾತೃಸ್ಥಾನ ಆನೆಗೊಂದಿ, ಬಸವ ಪ್ರಕಾಶನ ಮತ್ತು ಪುಸ್ತಕ ವ್ಯಾಪಾರಿಗಳು, ಗುಲಬುರ್ಗಾ.
3. ಕ್ಷೇತ್ರ ಕಾರ್ಯದ ಮೂಲಕ ಸಂಗ್ರಹಿಸಿದ ಮಾಹಿತಿ.
4. ಶಿವಪ್ರಸಾದ ಟಿ.ಆರ್., 2009, ಶ್ರೀಕೃಷ್ಣದೇವರಾಯ, ಚಿಂತನಗಂಗಾ ಪ್ರಕಾಶನ, ದಾವಣಗೆರೆ.
5. Shama Shastry. R., 1916, "A few Inscriptions of the ancient king of Anegundi" Quarterly Journals of mythic society, Vol-VIII, Bangalore.
6. ಗುರುಮೂರ್ತಿ ಪೆಂಡಕೂರು, 2010, "ಆಮುಕ್ತ ಮಾಲ್ಯದ ರಾಯವಾಚಕ ಮತ್ತು ದಿನಚರಿಯಿಂದ ಮೂಡಿಬಂದ ಕೃಷ್ಣದೇವರಾಯ" ಪು. 38–41, ಶ್ರೀಕೃಷ್ಣದೇವರಾಯನ ಜೀವನ ಮತ್ತು ಸಾಧನೆ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.
7. ದೇವರಕೊಂಡಾರೆಡ್ಡಿ (ಸಂ), 1999, ಕ.ವಿ.ಶಾ.ಸಂ.2, ಕೊಪ್ಪಳ ಜಿಲ್ಲೆ ಗಂಗಾವತಿ ತಾ, ಆನೆಗೊಂದಿ ಶಾ.ಸಂ. 34, ಕನ್ನಡ ವಿಶ್ವವಿದ್ಯಾಲಯ, ಹಂಪಿ.
8. Shama Shastry R., Ibid. Ins No. V
9. Shama Shastry R., Ibid. Ins No. II
10. ಶರಣಬಸಪ್ಪ ಕೋಲ್ಕಾರ, 2017, "ವಿಜಯನಗರ ಕಾಲದ ಆನೆಗೊಂದಿಯ ಅಪರೂಪದ ಆಯುಧ ಪುರುಷ ಸುದರ್ಶನಚಕ್ರ ಶಿಲ್ಪ ಮತ್ತು ಮಂದಿರ" ವಿಜಯನಗರ ಅಧ್ಯಯನ ಸಂ. 20, ಪು. 104–107, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು.
11. ಶರಣಬಸಪ್ಪ ಕೋಲ್ಕಾರ, 2020, ಭವ್ಯ ಪರಂಪರೆಯ ತಾಣ ಆನೆಗೊಂದಿ, ಆನೆಗೊಂದಿ ಉತ್ಸವ ಸಮಿತಿ, ಜಿಲ್ಲಾ ಆಡಳಿತ, ಕೊಪ್ಪಳ.
12. Narasimhan, K.R., 2021, "The Honnenahalli unpublished Inscription furnishing the date of the demise of Sri Krishnadevaraya" QJMS Vol 112, Bangalore.

ನಾಡಪ್ರಭು ಕೆಂಪೇಗೌಡ ಬಂಧನದಲ್ಲಿದ್ದ ಆನೆಗೊಂದಿ ಸೆರೆಮನೆ ಶೋಧ



ಜಿಂಜಿರ ಬೆಟ್ಟ



ಸೆರೆಮನೆ

ಕರ್ನಾಟಕದ ಇತಿಹಾಸದಲ್ಲಿ ಯಲಹಂಕ ನಾಡಪ್ರಭು ಕೆಂಪೇಗೌಡನಿಗೆ ವಿಶಿಷ್ಠ ಸ್ಥಾನವಿದೆ. ಯಲಹಂಕ ನಾಡು ವಿಜಯನಗರ ಸಾಮ್ರಾಜ್ಯದ ಅಧೀನ ಚಿಕ್ಕ ಸಾಮಂತ ರಾಜ್ಯವಾಗಿದ್ದರೂ ಅದರ ಪ್ರಭುವಾಗಿದ್ದ ಒಂದನೇ ಕೆಂಪೇಗೌಡರ ಕೊಡುಗೆ ಕರ್ನಾಟಕದ ಇತಿಹಾಸದಲ್ಲಿ ಚಿರಸ್ಮರಣೀಯವಾಗಿ ಉಳಿದಿದೆ. ಆ ವಿಶಿಷ್ಠ ಕೊಡುಗೆ ಎಂದರೆ ಸಮಕಾಲೀನ ಕರ್ನಾಟಕದ ರಾಜಧಾನಿಯೂ, ಭಾರತದ ಮಾಹಿತಿ ತಂತ್ರಜ್ಞಾನದ ರಾಜಧಾನಿಯೂ, ಏಷ್ಯಾದ ಅಭಿವೃದ್ಧಿಶೀಲ ನಗರವೆಂದೂ ಪ್ರಖ್ಯಾತಿ ಪಡೆದಿರುವ ಬೆಂಗಳೂರಿನ ನಿರ್ಮಾಣ. ಒಂದು ಚಿಕ್ಕ ಹಳ್ಳಿಯಾಗಿದ್ದ ಬೆಂಗಳೂರಿನ ಅಭಿವೃದ್ಧಿಗೆ ಶ್ರೀಕಾರ ಹಾಕಿದ ಶ್ರೇಯಸ್ಸು ಕೆಂಪೇಗೌಡರಿಗೆ ಸಲ್ಲುತ್ತದೆ. 1513ರಿಂದ 1569ರವರೆಗೆ

ಆಳಿದ ಮೊದಲನೆಯ ಕೆಂಪೇಗೌಡ 1537ರಲ್ಲಿ ಬೆಂಗಳೂರಿನ ಸುತ್ತಲೂ ಮಣ್ಣಿನ ಕೋಟೆಯನ್ನು ಕಟ್ಟಿಸಿದನು. ನಗರದ ಮೇರೆಗಳಾಗಿ ನಾಲ್ಕು ದಿಕ್ಕುಗಳಲ್ಲಿ ವೈಯಾಳಿ ಶಿಖರಗಳೆಂದು ಪ್ರಸಿದ್ಧವಾದ ನಾಲ್ಕು ಕಾವಲು ಗೋಪುರಗಳನ್ನು ನಿರ್ಮಿಸಿದನು. ಆತನ ಕನಸಿನಂತೆ ಇಂದು ಬೆಂಗಳೂರು ಆ ನಾಲ್ಕು ಗೋಪುರಗಳನ್ನು ಮೀರಿ ಸುತ್ತೆಲ್ಲಾ ಹತ್ತಾರು ಕಿಲೋಮೀಟರ್ ವ್ಯಾಪಿಸಿದೆ. ಕೆಂಪೇಗೌಡರನ್ನು ಇಂದು ಬೆಂಗಳೂರಿನ ನಿರ್ಮಾತೃ ಎಂದೇ ಗೌರವಿಸಲಾಗುತ್ತಿದೆ. ಬೆಂಗಳೂರಿನ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹಾಗೂ ಕೇಂದ್ರ ಬಸ್ ನಿಲ್ದಾಣಕ್ಕೂ ಸಹ ಅವರ ಹೆಸರಿಡುವುದರ ಮೂಲಕ ಕೆಂಪೇಗೌಡರ ಕೊಡುಗೆಯನ್ನು ಶಾಶ್ವತವಾಗಿ ನೆನಪಿಸಿಕೊಳ್ಳುವ ಕಾರ್ಯವನ್ನು ಮಾಡಲಾಗಿದೆ. ಇಂತಹ ಧೀಮಂತ ಕೆಂಪೇಗೌಡರು ತಮ್ಮ ಕೊನೆಗಾಲದಲ್ಲಿ ರಾಜದ್ರೋಹದ ಆಪಾದನೆ ಹೊತ್ತು ವಿಜಯನಗರ ಸಾಮ್ರಾಟರಿಂದ ಬಂಧನಕ್ಕೊಳಗಾಗಿ ಆನೆಗೊಂದಿ ಸೆರೆಮನೆಯಲ್ಲಿದ್ದರು. ಈ ಹಿನ್ನೆಲೆಯಲ್ಲಿ ಆನೆಗೊಂದಿಯಲ್ಲಿ ಕೆಂಪೇಗೌಡರು ಬಂಧನದಲ್ಲಿದ್ದ ಸೆರೆಮನೆ ಎಲ್ಲಿದೆ ಎನ್ನುವ ಕುರಿತು ನಾನು ನಡೆಸಿದ ಶೋಧನೆಯಲ್ಲಿ ಬೆಳಕಿಗೆ ಬಂದ ಸೆರೆಮನೆಯ ಕುರಿತ ವಿಶ್ಲೇಷಣೆಯನ್ನು ಇಲ್ಲಿ ಮಾಡಲಾಗಿದೆ.

ಯಲಹಂಕದ ನಾಡಪ್ರಭುಗಳು ಮತ್ತು ವಿಜಯನಗರದ ಸಂಬಂಧ:

ಯಲಹಂಕ ರಾಜಮನೆತನವು ಕ್ರಿ.ಶ 1418 ರಿಂದ 1728ರ ವರೆಗೆ ಅಸ್ತಿತ್ವದಲ್ಲಿತ್ತು. ಈ ಮನೆತನದ ಮೂಲಪುರುಷ ರಣಭೈರೇಗೌಡ. ಈತ ಮೂಲತಃ ತಮಿಳುನಾಡಿನ ಕಾಂಚಿಪುರಂ ಬಳಿಯ ಯಣಮಂಚಿ ಪುತ್ತೂರು ಎಂಬ ಹಳ್ಳಿಯಿಂದ ವಲಸೆ ಬಂದು ದೇವನಹಳ್ಳಿ ಬಳಿಯ ಆವತಿಯಲ್ಲಿ ನೆಲೆಸಿದನು. ರಣಭೈರೇಗೌಡನ ಮಗ ಜಯಗೌಡ ಎಂಬುವನು ಯಲಹಂಕಕ್ಕೆ ಬಂದು ನೆಲೆಯೂರಿದನು. ಈತನು ವಿಜಯನಗರ ಸಾಮ್ರಾಟರ ಅನುಮತಿಯೊಂದಿಗೆ ಅವರ ಅಧೀನದಲ್ಲಿ ಯಲಹಂಕದಲ್ಲಿ ಆಳ್ವಿಕೆ ಪ್ರಾರಂಭಿಸುತ್ತಾನೆ. 1418ರಲ್ಲಿ ಇವನೊಂದಿಗೆ "ಯಲಹಂಕ ನಾಡಪ್ರಭುಗಳ ರಾಜ್ಯ" ಅಸ್ವಿತ್ವಕ್ಕೆ ಬಂದಿತು. ಇವನು 1433ರ ವರೆಗೆ ಅಧಿಕಾರದಲ್ಲಿದ್ದು, "ಯಲಹಂಕ ಭೂಪಾಲ" ಎಂಬ ಬಿರುದನ್ನು ಹೊಂದಿದ್ದನು. ಇವನ ನಂತರ ಗಿಡ್ಡೇಗೌಡ ಮತ್ತು ಕೆಂಪನಂಜೇಗೌಡರು ಆಡಳಿತ ನಡೆಸಿದರು. ಕೆಂಪನಂಜೇಗೌಡರ ನಂತರ ಪಟ್ಟಕ್ಕೆ ಬಂದವನೇ ಯಲಹಂಕ ನಾಡಪ್ರಭುಗಳಲ್ಲಿ ಪ್ರಸಿದ್ಧನಾದ ಒಂದನೇ ಕೆಂಪೇಗೌಡ.[1]

ಮೊದಲನೆಯ ಕೆಂಪೇಗೌಡ ಮತ್ತು ಕೃಷ್ಣದೇವರಾಯ:

ಯಲಹಂಕ ನಾಡುಪ್ರಭುಗಳಲ್ಲೇ ಮೊದಲನೇ ಕೆಂಪೇಗೌಡ ಅತ್ಯಂತ ಪ್ರಸಿದ್ಧನಾದ ದೊರೆ. ಈತ ಬಾಲ್ಯದಲ್ಲೇ ವಿಜಯನಗರ ಸಾಮ್ರಾಜ್ಯ ವೈಭವದ ಬಗ್ಗೆ ಕೇಳಿದ್ದ. ತಮ್ಮ ರಾಜ್ಯ ಆ ಭವ್ಯ ಸಾಮ್ರಾಜ್ಯದ ಅಧೀನ ಎಂಬುದರ ಬಗ್ಗೆ ಆತನಿಗೆ ಅಭಿಮಾನವಿತ್ತು. ದಸರೆಯ ಸಂದರ್ಭದಲ್ಲಿ ಸಾಮ್ರಾಟರಿಂದ ತಂದೆ ಆಹ್ವಾನಿತನಾದಾಗ ತಾನೂ ಕೂಡಾ ತಂದೆಯೊಂದಿಗೆ ವಿಜಯನಗರಕ್ಕೆ ತೆರಳಿ ನವರಾತ್ರಿ ವಿಜಯದಶಮಿಯ ಆಚರಣೆಯ ವೈಭವವನ್ನು ಕಣ್ತುಂಬಿಕೊಂಡಿದ್ದ. ಅಷ್ಟೇ ಅಲ್ಲ ಆ ಸಂದರ್ಭದಲ್ಲಿ ನಡೆದ ಕುಸ್ತಿ

ಪಂದ್ಯದಲ್ಲಿ ರಾಜ ಪರಿವಾರದ ತಿರುಮಲರಾಜ ಎಂಬ ರಾಜಕುಮಾರನನ್ನೇ ಸೋಲಿಸಿ ಎಲ್ಲರೂ ಹುಬ್ಬೇರುವಂತೆ ಮಾಡಿದ್ದ.

1513ರಲ್ಲಿ ಕೆಂಪೇಗೌಡರು, ತಂದೆಯ ನಂತರ ಪಟ್ಟಕ್ಕೆ ಬಂದರು. ಆತನ ಕಿರೀಟಧಾರಣೋತ್ಸವ ಸಮಾರಂಭಕ್ಕೆ ಸಾಮ್ರಾಟ ಕೃಷ್ಣದೇವರಾಯನು ಕಾಣಿಕೆಗಳನ್ನು ಕಳುಹಿಸಿದ ಮತ್ತು ನೂತನ ಅರಸನಿಗೆ ವಾರ್ಷಿಕ 30,000 ವರಹಗಳ ಆದಾಯವಿದ್ದ ಹಲಸೂರು, ವರ್ತೂರು, ಬೇಗೂರು, ಜಿಗಣಿ, ತಲಘಟ್ಟಪುರ, ಕುಂಬಳಗೋಡು, ಕೆಂಗೇರಿ, ಹೆಸರಘಟ್ಟ ಮತ್ತು ಬಾಣಾವರ ಎಂಬ ಹನ್ನೆರಡು ಹೋಬಳಿಗಳನ್ನು ವಹಿಸಿದನು. ಈ ಎಲ್ಲಾ ಪ್ರದೇಶಗಳಿಂದಾಗಿ ರಾಜ್ಯವು ವಿಸ್ತಾರಗೊಂಡಿತು. ಕೆಂಪೇಗೌಡ ರಾಜಧಾನಿಯನ್ನು ಯಲಹಂಕದಿಂದ ಬೆಂಗಳೂರಿಗೆ ವರ್ಗಾಯಿಸಿ ಅದನ್ನು ಅಭಿವೃದ್ಧಿಪಡಿಸಿದನು. ಕೆಂಪೇಗೌಡನ ಉತ್ಸಾಹ, ಉತ್ತಮ ಆಡಳಿತ ಕಂಡು ಸಾಮ್ರಾಟ ಕೃಷ್ಣದೇವರಾಯನು ಪುನಃ ಆತನಿಗೆ ಬಳ್ಳಾಪುರ, ದೇವನಹಳ್ಳಿ ಮತ್ತು ಹೊಸಕೋಟೆಗಳನ್ನು ನೀಡಿ ಪುರಸ್ಕರಿಸಿದನು. ಕೆಂಪೇಗೌಡನು ಅನೇಕ ದೇವಾಲಯ, ಕೆರೆ (ಕೆಂಪಾಂಬುಧಿ) ಗಳನ್ನು ನಿರ್ಮಿಸಿ, ಧರ್ಮಶೀಲನಾಗಿ ಆಡಳಿತ ನಡೆಸಿ ಕೃಷ್ಣದೇವರಾಯನ ಜೀವಿತದವರೆಗೂ ನಿಷ್ಠನಾಗಿ ರಾಜ್ಯಭಾರ ಮಾಡಿದನು.[2]

ಕೆಂಪೇಗೌಡ ಮತ್ತು ಅಳಿಯ ರಾಮರಾಯ:

ವಿಜಯನಗರ ಸಾಮ್ರಾಜ್ಯದಲ್ಲಿ ಕೃಷ್ಣದೇವರಾಯನ ನಂತರ ಪ್ರ.ಶ 1530ರಲ್ಲಿ ಅಚ್ಯುತ ದೇವರಾಯ ಪಟ್ಟಕ್ಕೆ ಬಂದು, ಕ್ರಿ.ಶ. 1542ರ ವರೆಗೆ ಆಡಳಿತ ನಡೆಸಿದನು. ನಂತರ ಒಂದನೇ ವೆಂಕಟನು 1542ರಿಂದ 1543ರವರೆಗೆ ಆಡಳಿತ ನಡೆಸಿದನು. ಈ ಅವಧಿಯಲ್ಲೂ ಕೆಂಪೇಗೌಡರು ಸಾಮ್ರಾಟರಿಗೆ ನಿಷ್ಠನಾಗಿದ್ದನು. 1542ರಲ್ಲಿ ವಿಜಯನಗರದಲ್ಲಿ ರಾಜಕೀಯ ಕ್ಷೋಭೆ ಉಂಟಾಗಿ ಕೃಷ್ಣದೇವರಾಯನ ಅಳಿಯ ರಾಮರಾಯನು 1543ರಲ್ಲಿ ಸದಾಶಿವರಾಯನನ್ನು ಪಟ್ಟಕ್ಕೆ ಕೂಡಿಸಿದನು. ಸದಾಶಿವರಾಯ ಹೆಸರಿಗೆ ಮಾತ್ರ ರಾಜನಾಗಿದ್ದು ಅಧಿಕಾರವೆಲ್ಲ ರಾಮರಾಯನಲ್ಲಿ ಕೇಂದ್ರಿಕೃತವಾಯಿತು. 1550ರಲ್ಲಿ ಪ್ರಾಪ್ತ ವಯಸ್ಕನಾದ ಸದಾಶಿವರಾಯನು ರಾಮರಾಯನ ಅಧಿಕಾರವನ್ನು ವಿರೋಧಿಸಿದನು. ಆಗ ರಾಮರಾಯ ಸದಾಶಿವರಾಯನನ್ನು ಬಂಧಿಸಿ ಸಮಸ್ತ ಅಧಿಕಾರವನ್ನು ಕೈವಶ ಮಾಡಿಕೊಂಡು 1543ರಿಂದ 1565ರ ವರೆಗೆ ತಾಳಿಕೋಟೆ ಯುದ್ಧದಲ್ಲಿ ಸಾವನ್ನಪ್ಪುವವರೆಗೂ ಸರ್ವಾಧಿಕಾರಿಯಾಗಿ ಆಡಳಿತ ನಡೆಸಿದನು.

ಕೆಂಪೇಗೌಡನ ಮೇಲೆ ಆಪಾದನೆ:

ಕ್ರಮೇಣ ರಾಜಕೀಯವಾಗಿ ಪ್ರಬಲನಾದ ಕೆಂಪೇಗೌಡನಿಗೆ ವಿಜಯನಗರ ಸಾಮ್ರಾಜ್ಯದ ರಾಜಕೀಯ ಬೆಳವಣಿಗೆಗಳು ಅಸಮಾಧಾನವನ್ನುಂಟು ಮಾಡಿದವು. ರಾಮರಾಯನ ನಡವಳಿಕೆಗಳು ಸರಿಬರಲಿಲ್ಲ. ವಿಜಯನಗರದಿಂದ ಅಂತರ ಕಾಯ್ದುಕೊಳ್ಳಲು ಕೆಂಪೇಗೌಡ ನಿರ್ಧರಿಸಿದನು. ಮೇಲಾಗಿ ವಿಜಯನಗರದ ರಾಜಕೀಯ ಅಸ್ಥಿರತೆ

ಸಾಮಂತ ರಾಜ್ಯಗಳ ಆರ್ಥಿಕ ಪರಿಸ್ಥಿತಿಯ ಮೇಲೂ ಪ್ರಭಾವವನ್ನು ಬೀರಿತು. ಹಾಗಾಗಿ ತನ್ನದೇ ಆದ ಒಂದು ಟಂಕಶಾಲೆಯನ್ನು ಸ್ಥಾಪಿಸಿ, ಭೈರೇಶ್ವರ ನಾಣ್ಯಗಳನ್ನು ಚಲಾವಣೆಗೆ ತಂದನು. ಇದರ ಬಗ್ಗೆ ಲೂಯಿ ರೈಸ್ ರವರು ಹೀಗೆ ಬರೆಯುತ್ತಾರೆ "Not content with feudal honours, the chief now usurped the prerogatives of royalty and established a mint (tankasale), whence issued the Baire Deva coins. At this period Achyuta Raya, his patron, died, and was succeeded on the Vijayanagar throne by Sadasiva Raya, under the guardianship of Rama Raja. Rumour of Kempe Gauda's proceedings having reached the court, he was summoned to account and cast into prison, his territory being sequestered and added to that of Jagadeva Raya. After remaining in confinement at Anegundi for five years, he obtained release by the payment of a heavy fine, and his possessions were restored to him"[3] ಅಂದರೆ ಸಾಮಂತ ಗೌರವಗಳಿಂದ ತೃಪ್ತನಾಗದ ನಾಯಕನು ರಾಜ ಪದವಿಯ ಸಕಲ ಮರ್ಯಾದೆಗಳನ್ನು ಕೂಡಿಸಿಕೊಂಡು ಒಂದು ಟಂಕಸಾಲೆಯನ್ನು ಸ್ಥಾಪಿಸಿದನು ಎಂಬ ಮಾಹಿತಿ ಇದೆ. ಆದರೆ ಇದರಲ್ಲಿಯ ಅಭಿಪ್ರಾಯ ಸಮಂಜಸವೆನಿಸುವುದಿಲ್ಲ. ವಾಸ್ತವಿಕವಾಗಿ ಕೆಂಪೇಗೌಡನು ತನ್ನ ರಾಜ್ಯದ ಪ್ರಜೆಗಳ ಹಿತರಕ್ಷಣೆಗಾಗಿ ಮತ್ತು ವಿಜಯನಗರ ಸಾಮ್ರಾಜ್ಯದ ರಾಜಕೀಯ ಕ್ಷೋಭೆಯಿಂದ ಉಂಟಾದ ಆರ್ಥಿಕತೆ ಸ್ಥಿತಿಯ ಸುಧಾರಣೆಗಾಗಿ ಸ್ವತಃ ನಾಣ್ಯಗಳನ್ನು ಚಲಾವಣೆಗೆ ತಂದನು. ಆ ಸಂದರ್ಭದ ರಾಜಕೀಯ ಸನ್ನಿವೇಶವು ಕೂಡಾ ಅವನು ವಿಜಯನಗರದಿಂದ ಅನುಮತಿ ಪಡೆಯುವ ಸ್ಥಿತಿಯಲ್ಲಿ ಇರಲಿಲ್ಲ. ಆದರೆ ಇಂಥ ಅವಕಾಶಕ್ಕಾಗಿ ಕಾಯ್ದು ಕುಳಿತಿದ್ದ ಚನ್ನಪಟ್ಟಣದ ಜಗದೇವರಾಯನಂತಹವರಿಗೆ ಕೆಂಪೇಗೌಡನ ಈ ನಡೆ ಅವನನ್ನು ಹಣೆಯಲು ಮತ್ತು ರಾಜ್ಯವನ್ನು ಕಬಳಿಸಲು ಸುವರ್ಣಾವಕಾಶವನ್ನು ಕಲ್ಪಿಸಿತು. ತಕ್ಷಣವೇ ಕೆಂಪೇಗೌಡನು ವಿಜಯನಗರದ ಸಾರ್ವಭೌಮತ್ವವನ್ನು ಧಿಕ್ಕರಿಸಿದ್ದಾನೆಂದು, ಸ್ವಾತಂತ್ರ್ಯವನ್ನು ಘೋಷಿಸಿಕೊಂಡಿದ್ದಾನೆಂದು ರಾಮರಾಯನಿಗೆ ದೂರು ಸಲ್ಲಿಸಲಾಯಿತು.

ಕೆಂಪೇಗೌಡನ ಬಂಧನ–ಬಿಡುಗಡೆ:

ಕೆಂಪೇಗೌಡನ ಕೃತ್ಯದಿಂದ ಕೆರಳಿದ ರಾಮರಾಯ ಆತನಿಗೆ ರಾಜಧಾನಿಗೆ ಬಂದು ತನ್ನ ಮೇಲಿನ ಆಪಾದನೆಗಳಿಗೆ ಸ್ಪಷ್ಟನೆ ನೀಡುವಂತೆ ಸೂಚಿಸಿದನು. ದ್ರೋಹಿಗಳ ಒಳಸಂಚು ಅರಿಯದ ಕೆಂಪೇಗೌಡ ಸಾಮ್ರಾಟರ ಮೇಲಿನ ಗೌರವ ಹಾಗೂ ವಿಶ್ವಾಸದಿಂದಾಗಿ ವಿಜಯನಗರಕ್ಕೆ ಬಂದನು. ಅಲ್ಲಿ ವಿಚಾರಣೆ ನಡೆಯಿತು. ಕೆಂಪೇಗೌಡ ತನ್ನ ಕಾರ್ಯಕ್ಕೆ ಎಷ್ಟೇ ಸಮಜಾಯಿಷಿ ನೀಡಿದರೂ, ವಿರೋಧಿಗಳ ತಲೆಕೆಡಿಸುವಿಕೆಗೆ ಒಳಗಾಗಿದ್ದ ರಾಮರಾಯನು ಕೆಂಪೇಗೌಡನನ್ನು ರಾಜದ್ರೋಹಿ ಎಂದು ತೀರ್ಮಾನಿಸಿ, ಸೆರೆವಾಸದ ಶಿಕ್ಷೆ ವಿಧಿಸಿದನು. ತಕ್ಷಣ ಕೆಂಪೇಗೌಡನನ್ನು ಬಂಧಿಸಿ ಆನೆಗೊಂದಿ ಸೆರೆಮನೆಗೆ ತಳ್ಳಲಾಯಿತು.[4]

ಕೆಂಪೇಗೌಡನ ರಾಜ್ಯವನ್ನು ಪ್ರತ್ಯೇಕಿಸಿ ಜಗದೇವನ ರಾಜ್ಯಕ್ಕೆ ಸೇರಿಸಲಾಯಿತು. ಕೆಂಪೇಗೌಡರು ಆನೆಗೊಂದಿಯ ಸೆರೆಮನೆಯಲ್ಲಿ ಐದು ವರ್ಷಗಳ ಕಾಲ ಬಂಧನದಲ್ಲಿದ್ದು, ನಂತರ ಭಾರಿ ಜುಲ್ಮಾನೆಯನ್ನು ತೆತ್ತು ಬಿಡುಗಡೆ ಹೊಂದಿದನು. ಅವನ ರಾಜ್ಯವನ್ನು ಮರಳಿಸಲಾಯಿತು. ಮುಂದೆ ಕೆಂಪೇಗೌಡನ ಆಳ್ವಿಕೆಯು 1569ರ ವರೆಗೂ ಮುಂದುವರೆಯಿತು. ಬಂಧನಕ್ಕೆ ಮೊದಲು 43 ವರ್ಷ, ಬಿಡುಗಡೆಯಾದ ನಂತರ ಐದು ವರ್ಷ ಆಡಳಿತ ನಡೆಸಿದನು ಎಂದು ಲೂಯಿ ರೈಸ್‌ರವರು ಬರೆಯುತ್ತಾರೆ.[5] ಅವರ ವಿವರಣೆಯನ್ವಯ ಕೆಂಪೇಗೌಡರ ಬಂಧನ ಕ್ರಿ.ಶ 1560ರಲ್ಲಿ ಆಗಿ ಕ್ರಿ.ಶ. 1565ರಲ್ಲಿ ಬಿಡುಗಡೆ ಹೊಂದಿರುವುದು ಸ್ಪಷ್ಟವಾಗುತ್ತದೆ.

ಆನೆಗೊಂದಿ ಹಿನ್ನೆಲೆ:

ವಿಜಯನಗರ ಸಾಮ್ರಾಜ್ಯದ ಮೊದಲ ರಾಜಧಾನಿಯಾಗಿದ್ದ ಆನೆಗೊಂದಿ ಪ್ರಸ್ತುತ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನಲ್ಲಿದೆ. ಹಂಪಿಗೆ ಎದುರಾಗಿ ತುಂಗಭದ್ರಾ ನದಿಯ ಎಡತೀರದ ಮೇಲೆ ಇದೆ. ಆದಿಮಾನವನ ಕಾಲದಿಂದಲೂ ಚಟುವಟಿಕೆಯ ತಾಣವಾಗಿರುವ ಆನೆಗೊಂದಿ ಪೌರಾಣಿಕ ಪಂಪಾಕ್ಷೇತ್ರದ ಒಂದು ಭಾಗವಾಗಿದೆ. ರಾಮಾಯಣ ಕಾವ್ಯೋಕ್ತ ವಾನರರ ರಾಜಧಾನಿ ಕಿಷ್ಕಿಂದೆ ಎಂಬ ಹಿರಿಮೆ ಹೊಂದಿದೆ. ಹರಿಹರ ಬುಕ್ಕರು ಆನೆಗೊಂದಿಯಲ್ಲಿಯೇ ವಿಜಯನಗರಕ್ಕೆ ಅಸ್ತಿಭಾರ ಹಾಕಿದರು. ರಾಜಧಾನಿ ಹಂಪಿಯು ವಿಜಯನಗರಕ್ಕೆ ವರ್ಗಾವಣೆಯಾದ ಮೇಲೂ ಆನೆಗೊಂದಿ ಉತ್ತರದ ಸೇನಾತಾಣವಾಗಿತ್ತು. ವಿಜಯನಗರದ ಪತನಾನಂತರ ಅರವೀಡು ಮನೆತನ ಪೆನುಗೊಂಡ, ಚಂದ್ರಗಿರಿ, ವೆಲ್ಲೂರುಗಳಿಂದ ಆಡಳಿತ ನಡೆಸಿತು. ಗೋಲ್ಕಂಡ, ಬಿಜಾಪುರಗಳ ದಾಳಿಯಲ್ಲಿ ವೆಲ್ಲೂರು ಪತನಗೊಂಡ ನಂತರ ಅರವೀಡು ವಂಶಸ್ಥರಿಗೆ ಪುನಃ ಆನೆಗೊಂದಿ ದೊರೆಯಿತು. ಅವರು 1657 ರಿಂದ 1948ರ ವರೆಗೆ 'ವಿದ್ಯಾವಿಜಯನಗರ ನರಪತಿ ಸಂಸ್ಥಾನ' ಎಂಬ ಹೆಸರಿನಲ್ಲಿ ಆನೆಗೊಂದಿಯನ್ನು ಕೇಂದ್ರವನ್ನಾಗಿಟ್ಟುಕೊಂಡು ಸುತ್ತಲಿನ ಪ್ರದೇಶವನ್ನು ಆಳಿದರು. ಭಾರತದ ಸ್ವಾತಂತ್ರ್ಯಾನಂತರ 1948ರಲ್ಲಿ ನಡೆದ ಹೈದರಾಬಾದ್ ರಾಜ್ಯ ವಿಮೋಚನೆ ಹಾಗೂ ವಿಲೀನದೊಂದಿಗೆ ಆನೆಗೊಂದಿ ಸಂಸ್ಥಾನ ಕಣ್ಮರೆಯಾಯಿತು. ಆದರೆ ಆನೆಗೊಂದಿಯಲ್ಲಿ ಅರವೀಡು ವಂಶಸ್ಥರು ಇಂದಿಗೂ ಇದ್ದಾರೆ.[6]

ಆನೆಗೊಂದಿಯ ಸೆರೆಮನೆ ಹುಡುಕಾಟ:

ಆನೆಗೊಂದಿಯಲ್ಲಿ ಸುದೀರ್ಘ ಚಾರಿತ್ರಿಕ ಪರಂಪರೆಯ ಪ್ರತೀಕವಾಗಿ ಹಲವಾರು ಸ್ಮಾರಕಗಳಿವೆ. ಅವುಗಳಲ್ಲಿ ಕೋಟೆಗಳು, ರಂಗನಾಥ, ಗವಿರಂಗನಾಥ, ಲಕ್ಷ್ಮೀನರಸಿಂಹ, ವೀರಭದ್ರ, ಮಲ್ಲೇಶ್ವರ, ಕೇಶವ ದೇವಾಲಯಗಳು, ಜೈನಬಸದಿ, ನವವೃಂದಾವನ, ಪಂಪಾಸರೋವರ, ಚಿಂತಾಮಣಿ ಮಠ, ಆನೆಸಾಲು–ಒಂಟೆಸಾಲು, ಗಗನ ಮಹಲ್, ಸರಸ್ವತಿ ಮಠ ಮುಂತಾದ ಸ್ಮಾರಕಗಳು ಪ್ರಮುಖವಾಗಿವೆ. ಇವೆಲ್ಲಾ ಆನೆಗೊಂದಿ

ಗ್ರಾಮವನ್ನು ಒಳಗೊಂಡಂತೆ ಸುತ್ತಮುತ್ತಲಿನ ಬೆಟ್ಟ-ಗುಡ್ಡಗಳಲ್ಲಿ, ನದಿಯ ನಡುಗಡ್ಡೆಗಳಲ್ಲಿ ಇವೆ. ಇವುಗಳ ಜೊತೆಗೆ ನರಪತಿ ಸಂಸ್ಥಾನದ ಅರಮನೆ, ಸಚಿವಾಲಯ, ಬಂಧಿಖಾನೆಗಳು ಕೂಡ ಈ ಗ್ರಾಮದಲ್ಲಿವೆ. ಇಲ್ಲಿಯ ಬಂಧಿಖಾನೆ ಮಧ್ಯಮ ಪ್ರಮಾಣದ ಕಟ್ಟಡವಾಗಿದ್ದು, ನರಪತಿ ಸಂಸ್ಥಾನ ಕಾಲದ ಅಂದರೆ 17, 18ನೇ ಶತಮಾನದ್ದು, ಆದರೆ ಮೇಲಿನ ಕಟ್ಟಡಗಳಲ್ಲಿ ನಿರ್ದಿಷ್ಟವಾಗಿ ಇದುವೇ ವಿಜಯನಗರ ಕಾಲದ ಸೆರೆಮನೆ ಎಂದು ಗುರುತಿಸಿರಲಾಗಿರಲಿಲ್ಲ. ವಿಜಯನಗರ ಚರಿತ್ರೆಯ ಸಂದರ್ಭದಲ್ಲಿ ಮೇಲೆ ಗಮನಿಸಿದಂತೆ ಆನೆಗೊಂದಿಯಲ್ಲಿ ವಿಜಯನಗರ ಕಾಲದ ಸೆರೆಮನೆ ಇದ್ದಿತೆಂಬುದು ಸ್ಪಷ್ಟವಾದ ಸಂಗತಿ. ಈ ಸೆರೆಮನೆಯಲ್ಲಿಯೇ ಕೆಂಪೇಗೌಡ ಅಷ್ಟೇ ಅಲ್ಲ ಚಿತ್ರದುರ್ಗದ ಮೊದಲ ದೊರೆ ಮತ್ತಿ ತಿಮ್ಮಣ್ಣ ನಾಯಕ ಹಾಗೂ ಕೃಷ್ಣದೇವರಾಯನ ಮಗ ತಿರುಮಲನ ಹತ್ಯೆಯ ಆರೋಪದಲ್ಲಿ ಬಂಧಿಸಿದ್ದ ಮಂತ್ರಿ ಸಾಳ್ವ ತಿಮ್ಮರಸ ಮತ್ತು ಆತನ ಮಕ್ಕಳನ್ನು ಕೂಡಾ ಆನೆಗೊಂದಿ ಸೆರೆಮನೆಯಲ್ಲಿ ಬಂಧಿಸಿಡಲಾಗಿತ್ತು ಎಂಬುದು ತಿಳಿದುಬರುತ್ತದೆ.[7]

ಮೇಲಿನ ಉಲ್ಲೇಖಗಳನ್ವಯ ಆನೆಗೊಂದಿಯಲ್ಲಿ ಸೆರೆಮನೆ ಇತ್ತು ಎನ್ನುವುದು ಅತ್ಯಂತ ಸ್ಪಷ್ಟವಾದ ಸಂಗತಿ. ಈ ಹಿನ್ನೆಲೆಯಲ್ಲಿ ನನ್ನ ಗಮನಕ್ಕೆ ಬಂದ ಒಂದು ಬೃಹತ್ ಕಟ್ಟಡವೆಂದರೆ, ಸ್ಥಳೀಯರು ಕರೆಯುವ 'ಆನೆಸಾಲು-ಒಂಟಿಸಾಲು' ಎಂಬ ಕಟ್ಟಡ. ಇದು ಆನೆಗುಂದಿ ಗ್ರಾಮದ ಪಶ್ಚಿಮ ಬದಿಗೆ ದುರ್ಗಾದೇವಿ ಬೆಟ್ಟ ಅಥವಾ ವಾಲಿ ಪರ್ವತಕ್ಕೆ ಹೊಂದಿಕೊಂಡಂತೆ ಅದರ ದಕ್ಷಿಣ ಬದಿಯ ಬೆಟ್ಟದ ಮೇಲಿದೆ. ಆ ಬೆಟ್ಟದ ಮೇಲ್ಭಾಗದಲ್ಲಿ ಆನೆಗೊಂದಿ ಭಾಗದಲ್ಲಿಯೇ ಅತ್ಯಂತ ಬೃಹತ್ತಾದ ಮತ್ತು ವಿಶಾಲವಾದ ಈ ಕಟ್ಟಡವಿದೆ. ಈ ಕಟ್ಟಡ ಅರಮನೆಯಂತಾಗಲಿ, ದೇವಾಲಯದಂತಾಗಲಿ ಅಥವಾ ಪ್ರಾಣಿಗಳ ಲಾಯದಂತಾಗಲಿ ಇಲ್ಲ. ಬದಲಿಗೆ ಉಗ್ರಾಣ ಅಥವಾ ಶಸ್ತ್ರಾಸ್ತ್ರ ಕೊಠಡಿಯಂತಿದೆ. ಹಂಪಿ ಅಭಿವೃದ್ಧಿ ಪ್ರಾಧಿಕಾರದವರು ಇದನ್ನು Military Barrack ಎಂದು ಹೆಸರಿಸಿದ್ದಾರೆ. ಕಟ್ಟಡದ ವಿನ್ಯಾಸ, ಸುತ್ತಲಿನ ಭದ್ರತಾ ವ್ಯವಸ್ಥೆಯನ್ನು ಸೂಚಿಸುವ ಕಾವಲು ಗೋಪುರಗಳು, ಧಾನ್ಯದ ಕಣಜಗಳು, ನೀರಿನ ಸಂಗ್ರಹ ಮತ್ತು ಇಡೀ ಕಟ್ಟಡದ ಗೌಪ್ಯತೆಯನ್ನು ಅನುಲಕ್ಷಿಸಿ ಇದುವೇ ಆನೆಗೊಂದಿಯ ಕಾರಾಗೃಹವೆಂದು ನಾನು ಗುರುತಿಸಿದ್ದೆ ಮತ್ತು ಆ ಬಗೆಗೆ 2013 ರ ವಿಜಯನಗರ ಅಧ್ಯಯನ ವಿಚಾರ ಸಂಕಿರಣದಲ್ಲಿ "ಆನೆಗೊಂದಿಯಲ್ಲಿಯ ವಿಜಯನಗರ ಕಾಲದ ಕಾರಾಗೃಹ" ಎಂಬ ಪ್ರಬಂಧವನ್ನು ಮಂಡಿಸಿದ್ದೆ. ಅದು ವಿಜಯನಗರ ಅಧ್ಯಯನ ಸಂಪುಟ 18ರಲ್ಲಿ ಪ್ರಕಟವಾಗಿದೆ ಕೂಡಾ.[8] ಈ ನನ್ನ ಅಭಿಪ್ರಾಯವನ್ನು ಸಾಂದರ್ಭಿಕ ಪರಿಸರ ಹಾಗೂ ತಾರ್ಕಿಕ ವಿವೇಚನೆಯ ಆಧಾರದ ಮೇಲೆ ನಿರೂಪಿಸಿದ್ದೆ. ಆದರೆ ಮುಂದುವರೆದ ಆನೆಗೊಂದಿ ಬಗೆಗಿನ ನನ್ನ ಕ್ಷೇತ್ರಕಾರ್ಯದಲ್ಲಿ ಅಲ್ಲಿ ಪ್ರಚಲಿತವಿದ್ದ ಮೌಖಿಕ ಪರಂಪರೆಯೊಂದು ನನ್ನ ಮೊದಲಿನ ಅಭಿಪ್ರಾಯವನ್ನು ಬದಲಾಯಿಸಲು ಮತ್ತು ಬಹುಮಟ್ಟಿಗೆ ಖಚಿತವಾಗಿ ಆನೆಗೊಂದಿ ಸೆರೆಮನೆಯನ್ನು ಗುರುತಿಸಲು ಸಾಧ್ಯವಾಯಿತು.

ಮೌಖಿಕ ಪರಂಪರೆಯಲ್ಲಿ ಆನೆಗೊಂದಿ ಸೆರೆಮನೆ:

ಆನೆಗೊಂದಿ ಗ್ರಾಮದ ಉತ್ತರ ಬದಿಗೆ, ಗಂಗಾವತಿ-ಶಿವಪುರ ಮುಖ್ಯ ರಸ್ತೆಯ ಬಲಬದಿಗೆ ವಿಶಾಲವಾಗಿ ವ್ಯಾಪಿಸಿರುವ ಬೆಟ್ಟವೊಂದಿದೆ. ಅದಕ್ಕೆ ಸ್ಥಳೀಯರು ಜಿಂಜಿರ ಬೆಟ್ಟವೆಂದು ಕರೆಯುತ್ತಾರೆ. ಬೆಟ್ಟದ ಮೇಲಿನ ಕೆಲವು ಕಟ್ಟಡಗಳನ್ನು ಗಮನಿಸಿದ್ದ ನಾನು, ಆ ಬೆಟ್ಟ, ಅಲ್ಲಿಯ ಕಟ್ಟಡಗಳ ಬಗ್ಗೆ ಸ್ಥಳೀಯರಲ್ಲಿ ವಿಚಾರಿಸಿದಾಗ (ಆನೆಗೊಂದಿ ಗ್ರಾಮ ಮತ್ತು ಬೆಟ್ಟದ ಪಶ್ಚಿಮ ಕೊನೆಯಲ್ಲಿರುವ ಚಿಕ್ಕರಾಂಪುರ ಗ್ರಾಮ) ಅವರು ನನ್ನ ಮಟ್ಟಿಗೆ ಆಶ್ಚರ್ಯಕರವಾದ ಮಾಹಿತಿಯನ್ನು ತಿಳಿಸಿದರು. ಈ ಬೆಟ್ಟದ ಮೇಲೆ ಕೆಂಪೇಗೌಡರನ್ನು ಬಂಧಿಸಿಟ್ಟಿದ್ದ ಬಗ್ಗೆ ತಿಳಿಸಿದರು.[9] ಇದಕ್ಕಿಂತ ಹೆಚ್ಚಿಗೆ ಮಾಹಿತಿಯಾಗಲಿ, ಬೇರೆ ಅರಸರ ಸೆರೆವಾಸದ ಬಗೆಗಾಗಲಿ ಅವರಿಗೆ ಗೊತ್ತಿರಲಿಲ್ಲ. ನಿರ್ದಿಷ್ಟವಾಗಿ ಕೆಂಪೇಗೌಡರ ಸೇರವಾಸವನ್ನು ಸೂಚಿಸುವ ಈ ಮೌಖಿಕ ಮಾಹಿತಿ ತುಂಬಾ ಗಮನಾರ್ಹವಾದುದು. ಈಗಾಗಲೇ ಆನೆಗೊಂದಿಯಲ್ಲಿ ಸೆರೆಮನೆ ಇತ್ತು ಎನ್ನುವುದು ಸ್ಪಷ್ಟವಿದ್ದು, ಈಗ ಅದು ಎಲ್ಲಿದೆ ಎಂದು ಗುರುತಿಸಲು ಈ ಮೌಖಿಕ ಹೇಳಿಕೆಗಳು ಪೂರಕವಾದವು.

ಆನೆಗೊಂದಿ ಸೆರೆಮನೆ ಎಲ್ಲಿದೆ:

'ಕೆಂಪೇಗೌಡರನ್ನು ಈ ಬೆಟ್ಟದ ಮೇಲೆ ಬಂಧಿಸಿಟ್ಟಿದ್ದರಂತೆ' ಎಂದು ಸ್ಥಳೀಯರು ತೋರಿಸುವ ಬೆಟ್ಟವೇ "ಜಿಂಜರ ಬೆಟ್ಟ". ಇದು ಆನೆಗೊಂದಿ ಗ್ರಾಮದ ಉತ್ತರ ಬದಿಯಲ್ಲಿರುವ ವಿಸ್ತಾರವಾದ ಸುಮಾರು 400 ಮೀಟರ್ ಎತ್ತರವಾಗಿದೆ. ಈ ಬೆಟ್ಟದ ಪೂರ್ವದ ಕಣಿವೆಯಲ್ಲಿ ಸಣ್ಣ ಏಕಶಿಲಾ ಬೆಟ್ಟದ ಮೇಲೆ ವಿಶ್ವಕರ್ಮರ ಮೂಲ ಸರಸ್ವತಿ ಮಠವಿದೆ. ಬೆಟ್ಟದ ಮೇಲ್ಭಾಗದಲ್ಲಿ ವಿಶಾಲವಾದ ಸಮತಟ್ಟು ಪ್ರದೇಶವಿದ್ದು, ಸುಮಾರು 8 ಎಕರೆಯಷ್ಟು ವಿಸ್ತಾರವಾಗಿದೆ. ಆ ಬಯಲು ಪ್ರದೇಶಕ್ಕೆ ಇಕ್ಕಟ್ಟಾದ ಪ್ರವೇಶ ಮೆಟ್ಟಿಲುಗಳ ಹಾದಿ ಇದೆ. ಮೇಲೆ ರಕ್ಷಣಾ ಗೋಡೆಗಳ ಮಧ್ಯ ಹಲವಾರು ಶಿಥಿಲ ಕಟ್ಟಡಗಳು,



ಕಾವಲು ಗೋಪುರಗಳು, ಜನವಸತಿಯ ಮನೆಯ ಶಿಥಿಲ ಅವಶೇಷಗಳು ಇವೆ. ಜೊತೆಗೆ ನೈಸರ್ಗಿಕ ನೀರಿನ ಕೊಳಗಳು ಇವೆ. ಬೆಟ್ಟದ ಮೇಲೆ ತೀರಾ ಗೌಪ್ಯವಾಗಿರುವ ಈ ಕಟ್ಟಡಗಳೇ ವಿಜಯನಗರ ಕಾಲದ ಸೆರೆಮನೆಯಾಗಿತ್ತು ಎಂಬುದನ್ನು ಬಲವಾಗಿ ತರ್ಕಿಸಬಹುದು ಮತ್ತು ಇಲ್ಲಿಯೇ ಕೆಂಪೇಗೌಡರು ಬಂಧಿಯಾದದ್ದು ಇಲ್ಲಿಯೇ ಎಂದು ಸ್ಪಷ್ಟವಾಗಿ ಗುರುತಿಸಬಹುದು.

ಸೆರೆಮನೆ ಪ್ರದೇಶದ ಸ್ವರೂಪ:

ಸೆರೆಮನೆ ಹೊಂದಿರುವ ಜಿಂಜಿರ ಬೆಟ್ಟವನ್ನು ಅದರ ದಕ್ಷಿಣ ಹಾಗೂ ಉತ್ತರ ಬದಿಯಿಂದ ಏರಬಹುದು. ಉತ್ತರ ಬದಿಯದ್ದು ನೈಸರ್ಗಿಕ ದಾರಿಯಾಗಿದ್ದು ಕಠಿಣವಾಗಿದೆ. ಆದರೆ ದಕ್ಷಿಣ ಬದಿಯ ದಾರಿ ಸ್ವಲ್ಪ ಸುಗಮವಿದೆ. ಗವಿರಂಗನಾಥ ದೇವಾಲಯದ ಎದುರಿನ ಭಾಗದಿಂದ ಮೆಟ್ಟಿಲುಗಳ ದಾರಿ ಇದ್ದವು. ಈಗ ಅವುಗಳು ನಾಶವಾಗಿದ್ದು ಇಳಿಜಾರು ಬಂಡೆಯ ಮೇಲೆ ಸಾಗಬೇಕು. ಬೆಟ್ಟದ ಮೇಲ್ಭಾಗದಲ್ಲಿ ಕೆಲವು ಮೆಟ್ಟಿಲುಗಳು ಉಳಿದಿವೆ. ನೈಸರ್ಗಿಕ ಬಂಡೆಗಳಿಗನುಸಾರವಾಗಿ ಮೆಟ್ಟಿಲುಗಳು ಕೆಲವು ಕಡೆ ಅಗಲವಾಗಿದ್ದರೆ, ಇನ್ನು ಕೆಲವು ಕಡೆ ಚಿಕ್ಕದ್ದಾಗಿವೆ. ಮೆಟ್ಟಿಲುಗಳನ್ನು ಗ್ರಾನೈಟ್‌ನ ಚಪ್ಪಡಿಕಲ್ಲುಗಳಿಂದ ನಿರ್ಮಿಸಲಾಗಿದೆ. ಮೆಟ್ಟಿಲುಗಳ ಹಾದಿ ಬೆಟ್ಟದ ಮೇಲುಹಂತದಲ್ಲಿ ಉತ್ತರದಿಂದ ಪಶ್ಚಿಮಕ್ಕೆ ಹೊರಳಿ ಬೆಟ್ಟದ ತುದಿ ತಲುಪುತ್ತದೆ.[10]

ರಕ್ಷಣಾ ಗೋಡೆ (ಹೊರ ಆವರಣ):



ಬೆಟ್ಟದ ಮೇಲಿನ ಸೆರೆಮನೆಯ ಸಹಿತ ಎಲ್ಲಾ ಕಟ್ಟಡಗಳು ಮತ್ತು ವಸತಿ ಪ್ರದೇಶವನ್ನು ಒಳಗೊಂಡಂತೆ ಸುತ್ತಲೂ ರಕ್ಷಣಾಗೋಡೆಯನ್ನು ನಿರ್ಮಿಸಲಾಗಿದೆ. ಮಧ್ಯಮ ಪ್ರಮಾಣದ ಅಳತೆ ಕಲ್ಲುಗಳಿಂದ ಈ ಗೋಡೆಯನ್ನು ನಿರ್ಮಿಸಲಾಗಿದೆ. ಆದರೆ ಪೂರ್ವ ಹಾಗೂ ಪಶ್ಚಿಮ ಬದಿಯಲ್ಲಿ ನೈಸರ್ಗಿಕವಾಗಿ ಬೆಟ್ಟದ ಎತ್ತರದ ಸಾಲು ಇರುವುದರಿಂದ ಅಲ್ಲಿ ಗೋಡೆಯನ್ನು ನಿರ್ಮಿಸುವ ಅಗತ್ಯ ಉಂಟಾಗಿಲ್ಲ. ಹಾಗಾಗಿ ಸೆರೆಮನೆ ಪ್ರದೇಶದ ಮುಂಬದಿ ಹಾಗೂ ಹಿಂಬದಿ ಮಾತ್ರ ಈ ಗೋಡೆ ಇದ್ದು, ಪ್ರಸ್ತುತ ಬಹಳಷ್ಟು ನಾಶವಾಗಿದೆ ಮತ್ತು ಕೆಲವು ಕಡೆ ನಾಲ್ಕು ಫೀಟ್ ಎತ್ತರ, ಹಿಂಬದಿಯಲ್ಲಿ ಐದು ಫೀಟು ಎತ್ತರ ಮಾತ್ರ ಉಳಿದಿದೆ. ಸೆರೆಮನೆ ಪ್ರದೇಶಕ್ಕೆ ಇದು ಕೋಟೆಯೋಪಾದಿಯಲ್ಲಿದ್ದು, ಸೆರೆಮನೆಗೆ ಬಲವಾದ ಭದ್ರತೆ ಒದಗಿಸಿದೆ. ಈ ರಕ್ಷಣಾ ಗೋಡೆಯ ದಕ್ಷಿಣ ಬದಿಯಲ್ಲಿ ಪ್ರವೇಶ ದ್ವಾರವಿದೆ.

ಪ್ರವೇಶದ್ವಾರ ಮತ್ತು ಕಾವಲುಗಾರನ ಮನೆ:

ಹೊರ ಆವರಣದ ರಕ್ಷಣಾ ಗೋಡೆಯಲ್ಲಿ ಚಿಕ್ಕ ದ್ವಾರವಿದೆ. ಇದರ ದ್ವಾರ ಮಂಟಪ ನಾಶವಾಗಿರಬೇಕೆಂದು ತೋರುತ್ತದೆ. ಆದರೆ ಪ್ರವೇಶ ದ್ವಾರದ ಬಲಬದಿಯಲ್ಲಿ ದ್ವಾರದ ಕಾವಲುಗಾರನ ಚಿಕ್ಕಮನೆ ಇದೆ. ಅದು ಶಿಥಿಲವಾಗಿದ್ದು ಸುತ್ತಲಿನ ಗೋಡೆಗಳು ಮಾತ್ರ ಉಳಿದಿವೆ. ಚಿಕ್ಕ ಕಲ್ಲುಗಳಿಂದ ಈ ಮನೆಯನ್ನು ನಿರ್ಮಿಸಲಾಗಿದ್ದು, ಒಂದು ಗೋಡೆಯಲ್ಲಿ ಗೂಡು ಇದೆ. ಅದು ಕಮಾನಾಕೃತಿಯ ಮೇಲ್ತುದಿಯನ್ನು ಹೊಂದಿದ್ದು, ಸಣ್ಣ ಸಣ್ಣ ಕಲ್ಲುಗಳಿಂದ ಅದರ ಛಾವಣಿಯನ್ನು ನಿರ್ಮಿಸಿರುವುದು ವಿಶೇಷವಾಗಿದೆ.

ವಸತಿ ಪ್ರದೇಶ:

ಮೊದಲ ಆವರಣದಲ್ಲಿ ನೈಸರ್ಗಿಕ ಕೊಳದ ಪೂರ್ವ ಬದಿಯದು ವಸತಿ ಪ್ರದೇಶ. ಅಲ್ಲಿ ಹಲವಾರು ಮನೆಗಳ ತಳಪಾಯಗಳು, ರುಬ್ಬುವ ಗುಂಡುಗಳು, ಒರಳುಗಳು, ಮಡಕೆ ಚೂರುಗಳು, ಬೂದು ಮಿಶ್ರಿತ ಮಣ್ಣು ಕಂಡುಬರುತ್ತವೆ. ಸೆರೆಮನೆಯ ಕಾವಲುಗಾರರು, ಅಧಿಕಾರಿಗಳು ಮತ್ತು ಭದ್ರತಾ ಸೈನಿಕ ಸಿಬ್ಬಂದಿಗಾಗಿ ಈ ಮನೆಗಳನ್ನು ನಿರ್ಮಿಸಲಾಗಿರುವುದನ್ನು ತರ್ಕಿಸಬಹುದು.

ನೀರಿನ ಕೊಳಗಳು:

ಇಲ್ಲಿ ಒಟ್ಟು ಮೂರು ನೈಸರ್ಗಿಕ ನೀರಿನ ಕೊಳಗಳಿವೆ. ಇಡೀ ಬೆಟ್ಟದ ಮೇಲ್ಭಾಗದಲ್ಲಿ ಸುರಿಯುವ ಮಳೆ ನೀರು ಈ ಮೂರು ಕೊಳಗಳಲ್ಲಿ ಸಂಗ್ರಹವಾಗುತ್ತದೆ. ಇವುಗಳಲ್ಲಿ ಪೂರ್ವ ಬದಿಯದು ವಿಶಾಲವಾಗಿದೆ, ಇದರಲ್ಲಿ ವರ್ಷಪೂರ್ತಿ ನೀರಿರುತ್ತದೆ. ಕಾರಾಗೃಹದ ಸಿಬ್ಬಂದಿಗಳಿಗೆ ಮತ್ತು ಖೈದಿಗಳಿಗೆ ಇವುಗಳ ನೀರೇ ಕುಡಿಯಲು ಮತ್ತು ಇತರೆ ಉಪಯೋಗಕ್ಕೆ ಅನುಕೂಲವಾಗಿತ್ತು.



ಎರಡನೇ ಆವರಣ; ಸೆರೆಮನೆ, ಕಣಜ:

ಇಡೀ ಕೋಟೆಯ ಒಳಗಡೆ ಎರಡನೇ ಆವರಣ, ಮೊದಲ ಆವರಣಕ್ಕಿಂತ ಎತ್ತರದಲ್ಲಿದೆ. ಇದುವೇ ಸೆರೆಮನೆಯ ಪ್ರಧಾನ ಭಾಗ. ಈ ಭಾಗಕ್ಕೆ ಒಂದು ಆವರಣ ಗೋಡೆಯನ್ನು ನಿರ್ಮಿಸಲಾಗಿದೆ. ಒಳಭಾಗದಲ್ಲಿ ಸೆರೆಮನೆ ಕಟ್ಟಡ, ಧಾನ್ಯದ ಕಣಜ ಹಾಗೂ ಒಂದು ಕಾವಲು ಗೋಪುರವಿದೆ.



ಸೆರೆಮನೆ ಕಟ್ಟಡ ಇಲ್ಲಿರುವ ಎಲ್ಲಾ ಕಟ್ಟಡಗಳಿಗಿಂತ ದೊಡ್ಡದಾಗಿದೆ. ಅದರ ಒಳಭಾಗದಲ್ಲಿ ಕೊಠಡಿಗಳಿವೆ. ಆದರೆ ಪ್ರಸ್ತುತ ಚಾವಣಿ ಸಂಪೂರ್ಣ ಕುಸಿದಿದೆ. ಅದರ ಕಂಬಗಳು, ತೊಲೆಗಳು ನೆಲದಲ್ಲಿ ಬಿದ್ದಿವೆ. ಈ ಕಟ್ಟಡದ ಗೋಡೆಗಳು ಸುಮಾರು 15 ಫೀಟ್ ಎತ್ತರವಾಗಿವೆ. ಇದುವೇ ಸೆರೆಮನೆ ಕಟ್ಟಡವಾಗಿದ್ದು, ಇದರಲ್ಲಿಯೇ ಕೆಂಪೇಗೌಡರನ್ನು ಬಂಧಿಸಲಾಗಿತ್ತು ಎಂದು ಗುರುತಿಸಬಹುದು.

ಕಣಜ:

ಸೆರೆಮನೆ ಕಟ್ಟಡದ ಹಿಂಭಾಗದಲ್ಲಿ ವೃತ್ತಾಕಾರದ ಕಣಜ ಅಥವಾ ಶಸ್ತ್ರಾಸ್ತ್ರಗಳ ಸಂಗ್ರಹಗಾರವಿದೆ. ಅದರ ಛಾವಣಿ ಹಾಗೂ ಒಂದು ಗೋಡೆಯ ಭಾಗ ಕುಸಿದಿದೆ.

ಸೆರೆಮನೆ ಕಟ್ಟಡದ ಪೂರ್ವ ಬದಿಗೆ ಒಂದು ನೈಸರ್ಗಿಕ ಗುಂಡಿನಮೇಲೆ ಕಾವಲು ಗೋಪುರವಿದೆ. ಈ ಭಾಗದ ಹಿಂಬದಿಯುದ್ದಕ್ಕೂ ಕೋಟೆಗೋಡೆ ಇದ್ದು, ಇಡೀ ಪ್ರದೇಶ ಅತ್ಯಂತ ಭದ್ರತಾ ವ್ಯವಸ್ಥೆಯನ್ನು ಹೊಂದಿದೆ.

ಕಾವಲು ಗೋಪುರಗಳು:

ಸೆರೆಮನೆಯ ಭದ್ರತೆ ದೃಷ್ಟಿಯಿಂದ ಇಡೀ ಪ್ರದೇಶದ ಸುತ್ತಲೂ ಮತ್ತು ಬೆಟ್ಟದ ವಿವಿಧ ಹಂತಗಳಲ್ಲಿ ಕಾವಲು ಗೋಪುರಗಳನ್ನು ನಿರ್ಮಿಸಲಾಗಿದೆ. ಚಿಕ್ಕ ಚಿಕ್ಕ ಅಳತೆ ಕಲ್ಲುಗಳಿಂದ ಇವುಗಳನ್ನು ನಿರ್ಮಿಸಲಾಗಿದ್ದು, ಕೆಲವು ವೃತ್ತಾಕಾರದಲ್ಲಿ, ಕೆಲವು ಚೌಕ ವಿನ್ಯಾಸದಲ್ಲಿವೆ. ಒಳಾವರಣದಲ್ಲಿ ಒಂದು ಎತ್ತರವಾದ ನೈಸರ್ಗಿಕ ಬಂಡೆಯ ಮೇಲೂ ಚಿಕ್ಕದಾದ ಗೋಪುರವಿದೆ. ಇದರ ಮೇಲಿನಿಂದ ಗಮನಿಸಿದರೆ ಇಡೀ ಬೆಟ್ಟದ ಮೇಲ್ಭಾಗದ ವಿಹಂಗಮ ನೋಟ ದೊರೆಯುತ್ತದೆ. ಹಿಂಬದಿಯ ರಕ್ಷಣಾ ಗೋಡೆಯಿಂದ ಬೆಟ್ಟದ ಕೆಳಹಂತದಲ್ಲಿ ಎರಡು ಕಡೆ ಕಾವಲು ಗೋಪುರಗಳು ಮತ್ತು ಶಿಥಿಲವಾಗಿರುವ ಮಂಟಪಗಳಿವೆ.



ಆರಾಧನ ಸ್ಥಳ:

ಸೆರೆಮನೆ ಪ್ರದೇಶದ ಒಳಭಾಗದ ಪಶ್ಚಿಮ ಭಾಗದಲ್ಲಿ ನೈಸರ್ಗಿಕ ಗುಂಡುಗಳಿದ್ದು, ಅವುಗಳ ನಡುವೆ ಗವಿ ಇದೆ. ಅದರ ಒಳಭಾಗದಲ್ಲಿ ದೈವ ಸೂಚಕ ನೈಸರ್ಗಿಕ ಶಿಲೆಗಳಿವೆ. ಗವಿಯ ಹೊರಬದಿಯ ಗುಂಡುಗಳಿಗೆ ಸುಣ್ಣ ಲೇಪಿಸಲಾಗಿದ್ದು, ಅದು ದೈವಸ್ಥಾನವೆಂದು ಸೂಚಿಸಲಾಗಿದೆ. ಗವಿಯ ಎದುರಿಗೆ ಹೊರಭಾಗದಲ್ಲಿ ಒಂದು ಚೌಕ ಪೀಠದ ಮೇಲ್ಭಾಗದಲ್ಲಿ ನಾಲ್ಕು ಪಾದಗಳನ್ನು ಕೆತ್ತಲಾಗಿದೆ. ಇದರಿಂದಾಗಿ ಈ ಕೋಟೆಯಲ್ಲಿದ್ದ ಜನರಿಗೆ ಇದು ಆರಾಧನಾ ಕೇಂದ್ರವಾಗಿತ್ತೆಂದು ಗ್ರಹಿಸಬಹುದು.



ಸಮಾರೋಪ:

ಯಲಹಂಕ ನಾಡಪ್ರಭು ಮೊದಲನೇ ಕೆಂಪೇಗೌಡನು ತನ್ನ ಮನೆತನದಲ್ಲಿಯೇ ಅತ್ಯಂತ ಪ್ರಸಿದ್ಧ ದೊರೆಯಾಗಿದ್ದಾನೆ. ತನ್ನ ಸಾಮರ್ಥ್ಯ ಹಾಗೂ ಜನಪರ ಕಾರ್ಯಗಳಿಂದ ಯಲಹಂಕ ರಾಜ್ಯದ ಪ್ರತಿಷ್ಠೆಯನ್ನು ಹೆಚ್ಚಿಸಿದ ಕೀರ್ತಿ ಈತನಿಗೆ ಸಲ್ಲುತ್ತದೆ. ಆಧುನಿಕ ಕರ್ನಾಟಕದ ರಾಜಧಾನಿಯಾಗಿರುವ ಬೆಂಗಳೂರಿನ ಅಭಿವೃದ್ಧಿಗೆ ಶ್ರೀಕಾರಹಾಕಿ ಬೆಂಗಳೂರು ನಿರ್ಮಾಪಕ ಎಂಬ ಅಭಿದಾನಕ್ಕೆ ಪಾತ್ರನಾಗಿದ್ದಾನೆ.

ವಿಜಯನಗರ ಸಾಮ್ರಾಜ್ಯದ ಸಾಮಂತನಾಗಿದ್ದ ಕೆಂಪೇಗೌಡ ತನ್ನ ರಾಜ್ಯದ ಆರ್ಥಿಕ ಸ್ಥಿತಿಯ ಸುಧಾರಣೆಗಾಗಿ ಸ್ವಂತ ನಾಣ್ಯಗಳನ್ನು ಚಲಾಯಿಸುತ್ತಾನೆ. ಅದುವೇ ದೊಡ್ಡ ಪ್ರಮಾದವಾಗಿ ವಿಜಯನಗರದ ಅಳಿಯ ರಾಮರಾಯನು ಕೆಂಪೇಗೌಡನನ್ನು ಬಂಧಿಸಿ ಆನೆಗೊಂದಿ ಸೆರೆಮನೆಗೆ ತಳ್ಳಿದನು. ಐದು ವರ್ಷಗಳ ಕಾಲ ಸೆರೆಯಲ್ಲಿದ್ದ ಕೆಂಪೇಗೌಡನು ದಂಡತೆತ್ತು ಬಿಡುಗಡೆ ಹೊಂದುತ್ತಾನೆ.

ಕೆಂಪೇಗೌಡನ ಈ ಬಂಧನ–ಬಿಡುಗಡೆಯ ವಿಷಯವನ್ನು ಲೂಯಿರೈಸ್‌ರವರು ದಾಖಲಿಸಿದ್ದಾರೆ. ನಂತರದ ಇತಿಹಾಸಕಾರರು ಅದನ್ನು ಉಲ್ಲೇಖಿಸುತ್ತಾ ಬಂದಿದ್ದಾರೆ.[11] ಈಚೆಗೆ ಕೆಂಪೇಗೌಡನ ಬಂಧನ ಪ್ರಕರಣವನ್ನು ಪುಷ್ಟೀಕರಿಸುವ ಆಧಾರಗಳ ಕೊರತೆ ಇದೆ ಎಂಬ ಅನುಮಾನವನ್ನು ಕೆಲವರು ವ್ಯಕ್ತಪಡಿಸಿದ್ದರು.[12]ಆದರೆ ರೈಸ್‌ರವರ ಉಲ್ಲೇಖವನ್ನು ಅನುಲಕ್ಷಿಸಿ ನಾನು ಆನೆಗೊಂದಿಯ ಆನೆಸಾಲು–ಒಂಟೆಸಾಲು ಎಂಬ ಕಟ್ಟಡವೇ ವಿಜಯನಗರ ಕಾಲದ ಸೆರೆಮನೆ ಎಂದು ತರ್ಕಿಸಿ, ಅದರಲ್ಲೇ ಕೆಂಪೇಗೌಡರ ಬಂಧನದಲ್ಲಿದ್ದದ್ದು ಎಂಬ ವಿಷಯವನ್ನು ನಿರೂಪಿಸಿದ್ದೆ.[13] ಆದರೆ ಈಚೆಗೆ ಆನೆಗೊಂದಿಯಲ್ಲಿ ಕೆಂಪೇಗೌಡರ ಬಂಧನವಾಗಿದ್ದ ಸ್ಥಳದ ಬಗ್ಗೆ ಸ್ಥಳೀಯ ಹೇಳಿಕೆಗಳು ನನ್ನ ಗಮನಕ್ಕೆ ಬಂದವು. ಹಾಗಾಗಿ ನನ್ನ ಹಿಂದಿನ ಅಭಿಪ್ರಾಯವನ್ನು ಬದಲಿಸಿ, ಈ ಹೊಸ ಅಭಿಪ್ರಾಯವನ್ನು ಮಂಡಿಸಲಾಗಿದೆ. ಈ ನಿರ್ಧಾರಕ್ಕೆ ಸ್ಥಳೀಯರ ಮೌಖಿಕ ಮಾಹಿತಿಯೇ ಪ್ರಮುಖ ಆಕರವಾಗಿದೆ.

ಜನಸಾಮಾನ್ಯರಲ್ಲಿ ಪ್ರಚಲಿತದಲ್ಲಿರುವ ಈ ಹೇಳಿಕೆಗಳು ಯಾವುದೇ ಪೂರ್ವಗ್ರಹ ಪೀಡಿತವಲ್ಲ. ಕೆಂಪೇಗೌಡರ ಈ ಬಂಧನ ಪ್ರಕರಣದ ಹಿನ್ನೆಲೆ ಬಗೆಗಾಗಲಿ, ಆ ಬಗ್ಗೆ ಲೂಯಿ ರೈಸ್‌ರವರು ಬರೆದ ಬಗೆಗೆಯಾಗಲಿ ಅವರಿಗೆ ಮಾಹಿತಿ ಇಲ್ಲ. ಕೇವಲ ಜಿಂಜಿರ್ ಬೆಟ್ಟದ ಮೇಲೆ ಕೆಂಪೇಗೌಡರನ್ನು ಬಂಧಿಸಿಡಲಾಗಿತ್ತು ಎಂಬ ಸಂಗತಿ ಮಾತ್ರ ಗೊತ್ತಿರುವಂತಹದು. ಹಾಗಾಗಿ ಸದರಿ ಹೇಳಿಕೆ ಕಪೋಲಕಲ್ಪಿತ ಕಥೆಯಲ್ಲ. ರೈಸ್ ಹಾಗೂ ನಂತರದ ಇತಿಹಾಸಕಾರರು ದಾಖಲಿಸಿದ ವಿಷಯಕ್ಕೆ ಪೂರಕವಾಗಿದೆ ಈ ಹಿನ್ನೆಲೆಯಲ್ಲಿ ಕ್ಷೇತ್ರಕಾರ್ಯ ಕೈಗೊಂಡು ಆನೆಗೊಂದಿಯ ಜಿಂಜರ್ ಬೆಟ್ಟದ ಮೇಲಿರುವ ಕೋಟೆ ಕಟ್ಟಡಗಳನ್ನು ಪರಿಶೀಲಿಸಿ, ಅವುಗಳ ವಿನ್ಯಾಸ ಮತ್ತು ಗೌಪ್ಯತೆ ಹಾಗೂ ಜನರ ಹೇಳಿಕೆಗಳ ಆಧಾರದ ಮೇಲೆ ಯಲಹಂಕ ನಾಡಪ್ರಭು ಕೆಂಪೇಗೌಡ ಬಂಧನದಲ್ಲಿದ್ದ ವಿಜಯನಗರ ಕಾಲದ ಸೆರೆಮನೆ ಎಂದು ಈ ಮೂಲಕ ಖಚಿತವಾಗಿ ನಿರೂಪಿಸಲಾಗಿದೆ ಮತ್ತು ಆನೆಗೊಂದಿಯ ಕುರಿತಾಗಿ ಈವರೆಗೆ ಬಂದಿರುವ ಯಾವ ಪುಸ್ತಕಗಳಲ್ಲೂ ದಾಖಲಾಗದ ಜಿಂಜಿರ ಬೆಟ್ಟದ ಸ್ಮಾರಕಗಳ ಅಥವಾ ಸೆರೆಮನೆಯ ಬಗ್ಗೆ ಬೆಳಕು ಚೆಲ್ಲಲಾಗಿದೆ.

(ಹಂಪಿ ಉತ್ಸವ 2023 ರ ಅಂಗವಾಗಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಏರ್ಪಡಿಸಿದ್ದ ವಿಜಯನಗರ ಅಧ್ಯಯನ 25ನೇ ವಾರ್ಷಿಕ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ)

ಆಕರಗಳು ಮತ್ತು ಟಿಪ್ಪಣಿಗಳು:

1) ಶಿವಣ್ಣ ಕೆ.ಎಸ್., 1992, ಯಲಹಂಕದ ನಾಡಪ್ರಭುಗಳು "ಕರ್ನಾಟಕ ಚರಿತ್ರೆ" ಸಂ. 03, ಪುಟ 77–80, ಕನ್ನಡ ವಿಶ್ವವಿದ್ಯಾಲಯ, ಹಂಪಿ–ವಿದ್ಯಾರಣ್ಯ.

2) ಅದೇ

3) ಲೂಯಿ ರೈಸ್ ಬಿ., 1897, ಮೈಸೂರು ಗೆಜೆಟೆರಿಯರ್, ಸಂ. 02, ಪುಟ 21–22, ಪ್ರಕಾಶಕರು ವೆಸ್ಟ್ ಮಿನಿಸ್ಟರ್ ಎ ಕಾನ್‌ಸ್ಟೇಬಲ್ ಕಲೆಕ್ಷನ್ ಅಮೇರಿಕಾನ

4) ಅದೇ

5) ಅದೇ

6) ಶರಣಬಸಪ್ಪ ಕೋಲ್ಕಾರ್, 2013, ವಿಜಯನಗರದ ಮಾತೃಸ್ಥಾನ ಆನೆಗೊಂದಿ, ಬಸವ ಪ್ರಕಾಶನ ಮತ್ತು ಪುಸ್ತಕ ವ್ಯಾಪಾರಿಗಳು, ಗುಲಬರ್ಗಾ.

7) ಅದೇ ಪು 71–78.

8) ಶರಣಬಸಪ್ಪ ಕೋಲ್ಕಾರ್, 2014, "ಆನೆಗೊಂದಿಯಲ್ಲಿನ ವಿಜಯನಗರ ಕಾಲದ ಕಾರಾಗೃಹ", ವಿಜಯನಗರ ಅಧ್ಯಯನ, ಸಂ 18, ಪುಟ 109–115, ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು.

9) ಆನೆಗೊಂದಿ ನಿವಾಸಿ ಸತ್ಯರಾಜು (45), ಅವರು ತಮ್ಮ ತಂದೆ ಕೃಷ್ಣರಾಜುರವರು ತಿಳಿಸಿದ್ದರೆಂದು ಹೇಳುತ್ತಾರೆ. ಚಿಕ್ಕರಾಂಪುರ ಗ್ರಾಮದ ಕೆಲವು ಹಿರಿಯರು ಈ ಬಗ್ಗೆ ತಿಳಿಸುತ್ತಾರೆ.

10) ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮಾಹಿತಿ


11) ಶಿವಣ್ಣ ಕೆ.ಎಸ್., ಪೂರ್ವೋಕ್ತ

12) ವಸಂತಕುಮಾರ ಬಿ.ಎಸ್., (ಪ್ರ.ಸಂ), 2019, ಕರ್ನಾಟಕದ ಇತಿಹಾಸ, ಚೈತ್ರ ಬುಕ್ ಹೌಸ್, ಬೆಂಗಳೂರು.


13) ಶರಣಬಸಪ್ಪ ಕೋಲ್ಕಾರ್, 2014, ಪೂರ್ವೋಕ್ತ

*** ಕ್ಷೇತ್ರಕಾರ್ಯದಲ್ಲಿ ನೆರವಾದ ಮತ್ತು ಛಾಯಾಚಿತ್ರಗಳನ್ನು ಒದಗಿಸಿದ**

ಡಾ. ಶಿವಕುಮಾರ ಮಾಲಿಪಾಟೀಲ, ವೈದ್ಯರು ಶ್ರೀ ಮೈಲಾರಪ್ಪ ಬೂದಿಹಾಳ, ಶ್ರೀ ಮಂಜುನಾಥ ಗುಡ್ಲಾನೂರ, ಶ್ರೀ ಪ್ರಲ್ಹಾದ ಕುಲಕರ್ಣಿ, ಶ್ರೀ ಅರ್ಜುನ ಮತ್ತು ಹರನಾಯಕ ಇವರಿಗೆ ಧನ್ಯವಾದಗಳು



ರಾಮ ವಾಲಿಯನ್ನು ವಧಿಸಿದ ಸ್ಥಳ (ಐತಿಹ್ಯ)



ನರಪತಿ ಅರಸರ ಸಮಾಧಿ



ಜಿಂಜಿರ ಬೆಟ್ಟದ ಮೆಟ್ಟಿಲುಗಳು



ಸೆರೆಮನೆಯ ಹೊರ ಕೋಟೆ ಗೋಡೆ